# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಮೇ 14, 2022

ಸಂಪುಟ : 48 ಸಂಚಿಕೆ : 361 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಆಸಿಡ್ ದಾಳಿಗೊಳಗಾದವರಿಗೆ ನಿವೇಶನ ಅಥವಾ ಮನೆ: ಸಿಎಂ

ಬೆಂಗಳೂರು, ಮೇ 13- ಆಸಿಡ್ ದಾಳಿಗೊಳಗಾದ ಎಲ್ಲಾ ಹೆಣ್ಣು ಮಕ್ಕಳಿಗೆ ನಿವೇಶನ ಅಥವಾ ಮನೆ ನೀಡಲು ಆದೇಶ ಹೊರಡಿಸಲಾಗುವುದು ಹಾಗೂ ಅವರಿಗೆ ಸ್ವಯಂ ಉದ್ಯೋಗ ಯೋಜನೆಯಡಿ 5 ಲಕ್ಷ ರೂ.ಗಳವರೆಗೆ ನೆರವು ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

**ಸ್ವಯಂ ಉದ್ಯೋಗ ಯೋಜನೆಯಡಿ 5 ಲಕ್ಷ ರೂ.ವರೆಗೆ ನೆರವು**

ಅವರು ಇಂದು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದ 'ಹಲೋ ಕಂದಾಯ ಸಚಿವರೇ - 72 ಗಂಟೆಯಲ್ಲಿ ಮನೆ ಬಾಗಿಲಿಗೆ ಪಿಂಚಣಿ ಸಹಾಯವಾಣಿ' ಲೋಕಾರ್ಪಣೆಗೊಳಿಸಿ ಮಾತನಾಡುತ್ತಿದ್ದರು.

ಆಸಿಡ್ ದಾಳಿಗೆ ಒಳಗಾದ ವರು ಬಹಳಷ್ಟು ನೋವನ್ನು ಉಂಡಿರುತ್ತಾರೆ. ಸಮಾಜದಲ್ಲಿ ತಿರಸ್ಕಾರಕ್ಕೆ ಒಳಗಾಗಿರುತ್ತಾರೆ. ಅವರ ನೆರವಿಗೆ ನಿಲ್ಲುವುದು ಸರ್ಕಾರದ ಜವಾಬ್ದಾರಿ. ಈ ಹಿನ್ನೆಲೆಯಲ್ಲಿ ಅವರ ಮಾಸಾಶನವನ್ನು 3000ದಿಂದ 10 ಸಾವಿರಕ್ಕೆ ಹೆಚ್ಚಿಸಲಾಗಿದೆ. ಅದರ ಜೊತೆಗೆ ಈಗ ಅವರಿಗೆ ಬದುಕು ಸಾಗಿಸಲು ಮನೆ ಹಾಗೂ ಸ್ವಯಂ (3ನೇ ಪುಟಕ್ಕೆ)

## ಕನ್ನಡಕ್ಕಾಗಿ ವಿಧೇಯಕ, ಕನ್ನಡ ಕೇಳಲಿ ಗ್ರಾಹಕ

ದಾವಣಗೆರೆ, ಮೇ 13 - ಕನ್ನಡ ಕುರಿತು ಇರುವ ಹತ್ತಾರು ಕಾಯ್ದೆಗಳನ್ನು ಒಗ್ಗೂಡಿಸಿ, ಅವುಗಳನ್ನು ಒಂದೇ ಚೌಕಟ್ಟಿನಲ್ಲಿ ತರಲು 'ಸಮಗ್ರ ಕನ್ನಡ ಭಾಷಾ ಅಭಿವೃದ್ಧಿ ವಿಧೇಯಕ'ದ ಕರಡು ರೂಪಿಸಲಾಗುತ್ತಿದೆ. ಈ ವಿಧೇಯಕ ಜಾರಿಗೆ ಬಂದರೆ ಕನ್ನಡಿಗರ ಭವಿಷ್ಯ ಮತ್ತೆ ತೆರೆಯಲಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಹೇಳಿದ್ದಾರೆ.

ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಮತ್ತು ನಗರ ಪಾಲಿಕೆ ಕನ್ನಡ ಜಾಗೃತಿ ಸಮಿತಿಗಳ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ 'ಕನ್ನಡ ನುಡಿ ನಡೆ ಕಾಯಕ' ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಇದುವರೆಗೂ ಕನ್ನಡ ಕುರಿತ ಹಲವಾರು ನಿಯಮಗಳನ್ನು ರೂಪಿಸಲಾಗಿದೆ. ಆದರೆ ವಿಧೇಯಕಗಳಲ್ಲಿ ಯಾವುದನ್ನೂ ಹೇಳಿಲ್ಲ. ಹೀಗಾಗಿಯೇ ಕನ್ನಡ ಜಾರಿಗೆ ತರಲು ಹೋದಾಗ ಸಮಸ್ಯೆಗಳು ಎದುರಾಗುತ್ತಿವೆ. ಕನ್ನಡವನ್ನು ಸಾರ್ವಭೌಮ ಮಾಡುವ ಬಗ್ಗೆ ಅಡ್ಡ ಗೋಡೆ ಮೇಲೆ ದೀಪ ಇಡುವ ನೀತಿ ರೂಪಿಸಲಾಗಿದೆಯೇ ಹೊರತು, ಪೂರಕ ಕಾಯ್ದೆ ಇಲ್ಲ ಎಂದವರು ವಿಷಾದಿಸಿದರು.

ಇದಕ್ಕಾಗಿಯೇ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸಮಗ್ರ ಕನ್ನಡ ಭಾಷಾ ಅಭಿವೃದ್ಧಿ ವಿಧೇಯಕದ ಕರಡನ್ನು ರೂಪಿಸುತ್ತಿದೆ. ಈ ಕರಡಿನ ಮೂಲಕ ಕನ್ನಡ ಕುರಿತು ಇರುವ ಎಲ್ಲ ಕಾಯ್ದೆಗಳನ್ನು ಒಗ್ಗೂಡಿಸಿ, ಒಂದೇ ಚೌಕಟ್ಟಿನಲ್ಲಿ ತರಲಾಗುವುದು. ಶೀಘ್ರದಲ್ಲೇ ಕರಡನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗುವುದು ಎಂದರು.



**ಕನ್ನಡಕ್ಕಾಗಿ ಸಮಗ್ರ ಕಾಯ್ದೆ ರೂಪಿಸುವ ಜೊತೆಗೆ ಕನ್ನಡಿಗರು ಗ್ರಾಹಕ ಶಕ್ತಿಯ ಮೂಲಕ ಭಾಷೆ ಬೆಳೆಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಕರೆ**

ಕನ್ನಡವನ್ನು ಉಳಿಸಿ - ಬೆಳೆಸಲು ಕನ್ನಡಿಗರು ವ್ಯಾಪಾರಿ ಸಂಸ್ಕೃತಿಯ ಮೂಲಕವೇ ಉತ್ತರ ಕಂಡುಕೊಳ್ಳಬೇಕಿದೆ. ಗ್ರಾಹಕ ಸಂಸ್ಕೃತಿ ಪ್ರಧಾನವಾಗಿರುವ ಈ ಸಮಯದಲ್ಲಿ, ಕನ್ನಡಿಗರು ಗ್ರಾಹಕರಾಗಿ ಹೆಚ್ಚು ಕನ್ನಡ ಕೇಳಬೇಕು. ಮೊಬೈಲ್‌ನಿಂದ ಹಿಡಿದು ಅಂಗಡಿಗಳವರೆಗೆ ಎಲ್ಲೆಡೆ ಕನ್ನಡ ಬಳಸಬೇಕು. ಕನ್ನಡ ಕಾಣಿಸುವಂತೆ ಹಾಗೂ ಕೇಳಿಸಿಕೊಳ್ಳುವಂತೆ ಮಾಡಬೇಕು. ಆಗ ಮಾತ್ರ ಕನ್ನಡ ಉಳಿದು, ಬೆಳೆಯುತ್ತದೆ ಎಂದು (4ನೇ ಪುಟಕ್ಕೆ)

## ನೀಟ್-ಪಿಜಿ ಪರೀಕ್ಷೆಗೆ ಸುಪ್ರೀಂ ತಡೆಯಿಲ್ಲ

ನವದೆಹಲಿ, ಮೇ 13- ನೀಟ್ - ಪಿಜಿ - 22 ಪರೀಕ್ಷೆಗಳನ್ನು ಮುಂದೂಡಬೇಕೆಂಬ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದ್ದು, ಪರೀಕ್ಷೆ ಮುಂದೂಡಿದರೆ ವೈದ್ಯರು ಲಭ್ಯವಾಗುವುದಿಲ್ಲ ಹಾಗೂ ರೋಗಿಗಳ ಮೇಲೆ ಗಂಭೀರ ಪರಿಣಾಮವಾಗುತ್ತದೆ ಎಂದು ತಿಳಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಸೂರ್ಯ ಕಾಂತ್ ಅವರನ್ನು ಒಳಗೊಂಡ ಪೀಠದ ಎದುರು ಪರೀಕ್ಷೆ ಮುಂದೂಡಬೇಕೆಂದು ಅರ್ಜಿ ದಾಖಲಿಸಲಾಗಿತ್ತು. ಇದಕ್ಕೆ ಸಮ್ಮತಿಸದ ನ್ಯಾಯಾಲಯ, ಪರೀಕ್ಷೆ ಮುಂದೂಡುವುದರಿಂದ ಅನಿಶ್ಚಿತತೆ ಹಾಗೂ ಗೊಂದಲ ಉಂಟಾಗುತ್ತದೆ. ಇದು ವಿದ್ಯಾರ್ಥಿಗಳ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ ಎಂದು ತಿಳಿಸಿದೆ. ಕೊರೊನಾದಿಂದ ಬದಲಾಗಿರುವ ಪರೀಕ್ಷಾ ವೇಳಾಪಟ್ಟಿ ಸರಿದಾರಿಗೆ (2ನೇ ಪುಟಕ್ಕೆ)

## ಚಂದ್ರನ ಮಣ್ಣಿನ ಮೇಲೆ ಸಸಿ

ವಾಷಿಂಗ್ಟನ್, ಮೇ 13 – ಚಂದ್ರನಿಂದ ತರಲಾದ ಮಣ್ಣಿನಲ್ಲಿ ಸಸಿ ಬೆಳೆಸುವಲ್ಲಿ ವಿಜ್ಞಾನಿಗಳು ಯಶಸ್ಸು ಕಂಡಿದ್ದಾರೆ. ಅಪೋಲೋ ಯೋಜನೆಯಡಿ ಗಗನಯಾತ್ರಿಗಳು ಮಣ್ಣು ತಂದಿದ್ದರು. ವಿಜ್ಞಾನಿಗಳ ಈ ಯಶಸ್ಸು ಚಂದ್ರನ ಮೇಲೆ ಹಣ್ಣು ಬೆಳೆಯುವ ಹಾಗೂ ಆಕ್ಸಿಜನ್ ಪಡೆಯುವತ್ತ ಹೆಜ್ಜೆಯಾಗಲಿದೆ.

**ವಿಜ್ಞಾನಿಗಳ ಈ ಯಶಸ್ಸು ಚಂದ್ರನ ಮೇಲೆ ಹಣ್ಣು ಬೆಳೆಯುವ ಹಾಗೂ ಆಕ್ಸಿಜನ್ ಪಡೆಯುವತ್ತ ಹೆಜ್ಜೆಯಾಗಲಿದೆ**

ಚಂದ್ರನ ಮೇಲಿನ ಮಣ್ಣಿನಿಂದ ಸಸಿ ಬೆಳೆಸಬಹುದು ಎಂಬುದನ್ನು ಅಮೆರಿಕದ ಫ್ಲೋರಿಡಾ ವಿಶ್ವವಿದ್ಯಾನಿಲಯದ ಸಂಶೋಧಕರು ಸಾಬೀತು ಪಡಿಸಿದ್ದಾರೆ.

ಈ ಕುರಿತು ಕಮ್ಯುನಿಕೇಷನ್ಸ್ ಬಯಾಲಜಿ ನಿಯತಕಾಲಿಕದಲ್ಲಿ ಅಧ್ಯಯನ ಪ್ರಕಟಿಸಲಾಗಿದೆ. ಭೂಮಿ ಹಾಗೂ ಚಂದ್ರನ ಮೇಲಿನ ಮಣ್ಣಿನಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಮುಂದಿನ ದಿನಗಳಲ್ಲಿ ಸುದೀರ್ಘ ಗಗನಯಾತ್ರೆ ಕೈಗೊಳ್ಳಲು ಚಂದ್ರನನ್ನು (4ನೇ ಪುಟಕ್ಕೆ)

## ದಂಪತಿ ಹೃದಯಗಳ ಮಧ್ಯದ ನೆಟ್‌ವರ್ಕ್ ಸದಾ ಜಾಗೃತವಾಗಿರಲಿ

ದಾವಣಗೆರೆ, ಮೇ 13- ಅತಿ ಹೆಚ್ಚು ಮೊಬೈಲ್ ಬಳಕೆಯಿಂದಾಗಿ ಕುಟುಂಬಗಳಲ್ಲಿ ಸಾಮರಸ್ಯ ಹಾಳಾಗುತ್ತಿದೆ. ಮೊಬೈಲ್ ಸಂಪರ್ಕ ಇರಲಿ, ಬಿಡಲಿ ದಂಪತಿಗಳ ಹೃದಯಗಳ ಮಧ್ಯದ ನೆಟ್‌ವರ್ಕ್ ಸದಾ ಜಾಗೃತವಾಗಿರಲಿ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಆಶಿಸಿದರು.

**ಕಂದಗಲ್ಲು ಗ್ರಾಮದಲ್ಲಿನ ಧಾರ್ಮಿಕ ಕಾರ್ಯಕ್ರಮದಲ್ಲಿ ತರಳಬಾಳು ಜಗದ್ಗುರುಗಳು**

ದಾವಣಗೆರೆ ತಾಲ್ಲೂಕು ಕಂದಗಲ್ಲು ಗ್ರಾಮದಲ್ಲಿ ಮೂರು ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ದೇಗುಲದ ಕಳಸಾರೋಹಣ, ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದ ನಂತರ, ಧಾರ್ಮಿಕ ಸಭಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು. (2ನೇ ಪುಟಕ್ಕೆ)



## 19ರಂದು ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ

ಬೆಂಗಳೂರು, ಮೇ 13- ಮಾರ್ಚ್-ಏಪ್ರಿಲ್ ಮಾಹೆಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಇದೇ 19 ರಂದು ಪ್ರಕಟಗೊಳ್ಳಲಿದೆ.

ಅಂದು ಬೆಳಿಗ್ಗೆ 10.30 ರ ನಂತರ ವಿದ್ಯಾರ್ಥಿಗಳು ವೆಬ್‌ಸೈಟ್‌ನಲ್ಲಿ ಫಲಿತಾಂಶ ಪಡೆದುಕೊಳ್ಳಬಹುದು. ಕಳೆದ ಎರಡು ವರ್ಷಗಳಿಂದ ಕೋವಿಡ್-19ರಿಂದ ವಿದ್ಯಾರ್ಥಿ ಗಳಿಗೆ ಶಾಲೆಗಳಲ್ಲಿ ಪೂರ್ಣವಾಗಿ ಪಾಠ ಕೇಳಲು ಸಾಧ್ಯವಾಗಿಲ್ಲ.

ಈ ಕಾರಣದಿಂದ ಪ್ರಸಕ್ತ ವರ್ಷವೂ (3ನೇ ಪುಟಕ್ಕೆ)

## ರೈಲ್ವೆ : 72 ಸಾವಿರ ಹುದ್ದೆಗಳು ರದ್ದು

ನವದೆಹಲಿ, ಮೇ 13 – ದೇಶದ ಅತಿ ದೊಡ್ಡ ಉದ್ಯೋಗದಾತ ಕಂಪನಿಯಾಗಿರುವ ರೈಲ್ವೆ, ಕಳೆದ ಆರು ವರ್ಷಗಳಲ್ಲಿ 72 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ರದ್ದುಗೊಳಿಸಿದೆ. ಈ ಅವಧಿಯಲ್ಲಿ ರೈಲ್ವೆ ಒಟ್ಟು 81 ಸಾವಿರ ಹುದ್ದೆಗಳನ್ನು ವಾಪಸ್ ನೀಡಲು ಪ್ರಸ್ತಾಪಿಸಿತ್ತು ಎಂದು ಅಧಿಕೃತ ದಾಖಲೆಗಳಲ್ಲಿ ತಿಳಿಸಲಾಗಿದೆ.

ಈ ಎಲ್ಲ ಹುದ್ದೆಗಳು ಸಿ ಹಾಗೂ ಗ್ರೂಪ್ ಡಿ ವರ್ಗದವು. ತಂತ್ರಜ್ಞಾನದ ಕಾರಣದಿಂದಾಗಿ ಈ ಹುದ್ದೆಗಳ (2ನೇ ಪುಟಕ್ಕೆ)

## ವಾಡಿಕೆಗಿಂತ 5 ದಿನ ಮೊದಲೇ ಮುಂಗಾರು

ನವದೆಹಲಿ, ಮೇ 13 - ಮುಂಗಾರು ಈ ಬಾರಿ ವಾಡಿಕೆಗೆ ಐದು ದಿನ ಮುನ್ನವೇ ಕೇರಳವನ್ನು ಪ್ರವೇಶಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ವಾಡಿಕೆಯಂತೆ ಜೂನ್ 1ಕ್ಕೆ ಮುಂಗಾರು ಕೇರಳ ಪ್ರವೇಶಿಸುತ್ತದೆ. ಈ ವರ್ಷ ಮೇ 27ರಂದೇ ಕೇರಳವನ್ನು ಪ್ರವೇಶಿಸುವ ಸಾಧ್ಯತೆ ಇದೆ. ಮುಂಗಾರು ಮೇ 15ರಂದು ಅಂಡಮಾನ್ (4ನೇ ಪುಟಕ್ಕೆ)

## ಬಿ.ವಿ. ಕಲ್ಯಾಣಮ್ಮ ಲಿಂಗೈಕ್ಯ



ದಾವಣಗೆರೆ ಸಿಟಿ ಕೆ.ಬಿ. ಬಡಾವಣೆ ವಾಸಿ
ದಿ॥ ಬಿ.ವಿ. ಶಾಂತವೀರಯ್ಯನವರ ಧರ್ಮಪತ್ನಿ

**ಶ್ರೀಮತಿ ಕಲ್ಯಾಣಮ್ಮ**

ಅವರು ದಿನಾಂಕ 13.05.2022ರ ಶುಕ್ರವಾರ ಬೆಳಿಗ್ಗೆ 8.30ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 92 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.5.2022ರ ಶುಕ್ರವಾರ ಸಂಜೆ 5 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ :**

- **ಶ್ರೀಮತಿ ವಿಮಲಮ್ಮ ಶ್ರೀ ಎಸ್. ಮಂಜುನಾಥ್,** ವಕೀಲರು
- **ಶ್ರೀಮತಿ ನಯನ ಶ್ರೀ ನಟರಾಜ್,** ಜಂಟಿ ಆಯುಕ್ತರು, ಆದಾಯ ತೆರಿಗೆ ಇಲಾಖೆ, ದಾವಣಗೆರೆ.
- **ಶ್ರೀಮತಿ ಮಂಜುಳ ಮತ್ತು ಶ್ರೀ ಎ. ಮಂಜುನಾಥ್,** ನಿವೃತ್ತ ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
- **ಶ್ರೀಮತಿ ಪೂರ್ಣಿಮ ಮತ್ತು ಶ್ರೀ ವಿನಾಯಕ ರಾಜ್,** ಕಾರ್ಯಪಾಲಕ ಇಂಜಿನಿಯರ್, ಬೆಸ್ಕಾಂ ದಾವಣಗೆರೆ.
- **ಶ್ರೀಮತಿ ಡಾ॥ ಮೃದುಲ ಮತ್ತು ಶ್ರೀ ಡಾ॥ ಬಸವರಾಜ್**

ಮೊಮ್ಮಕ್ಕಳಾದ: **ಮಧುರಿಮಾ, ಡಾ॥ ನಿಹಾಲ್, ನೇಹಾ, ಮಲ್ಲೇಶ್, ಮಾನಸ, ಅಕ್ಷಯ್, ಅಮೋಘ್** ಮರಿ ಮೊಮ್ಮಗಳು: **ಕು. ನಿಧಿ**

**ಮೊ: 98456 75146, 98456 14943**

## ಪ್ರಥಮ ವರ್ಷದ ಪುಣ್ಯಸ್ಮರಣೆ



ಜನನ: 1.06.1969 ನಿಧನ: 17.6.2021

**ದಿ॥ ನಾಗರಾಜ್ ಎಂ. ಮತ್ತಿಹಳ್ಳಿ**

ತರಗಾರ ಮೇಸ್ತ್ರಿ

*ಉಸಿರು ಹೋದರೂ ಹೆಸರು ಉಳಿಸಿದ*
*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.*
*ಸದಾ ನಿಮ್ಮ ಸ್ಮರಣೆಯಲ್ಲಿ ನೀವು ಹಾಕಿಕೊಟ್ಟ ದಾರಿಯಲ್ಲಿ ಮುನ್ನಡೆಯುತ್ತಿರುವ*

ಇವರ ಆತ್ಮಶಾಂತಿಗಾಗಿ **ಪ್ರಥಮ ಪುಣ್ಯಸ್ಮರಣೆಯನ್ನು** ದಿನಾಂಕ 15.5.2022ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಎಸ್.ಎಸ್ ಬಡಾವಣೆ ಮೃತರ ಸ್ವಗೃಹ #1966/71 "ಆಶೀರ್ವಾದ ನಿಲಯ" ಇಲ್ಲಿ ಏರ್ಪಾಡಿಸಲಾಗಿದ್ದು, ತಾವುಗಳು ಆಗಮಿಸಿ ಅವರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ತಾಯಿ: **ಶ್ರೀಮತಿ ಗೌರಮ್ಮ** ಪತ್ನಿ: **ಶ್ರೀಮತಿ ಶೈಲಜಾ** ಮಕ್ಕಳು: **ಅಭಿ, ಅನುಷ**
ಅಣ್ಣ: **ಪ್ರಭುಲಿಂಗ,** ತರಗಾರ ಮೇಸ್ತ್ರಿ ತಮ್ಮಂದಿರಾದ: **ಚಿದಾನಂದ, ರಾಜು, ವಿರುಪಾಕ್ಷ**
ಸೊಸೆಯಂದಿರು, ಮಕ್ಕಳು ಹಾಗೂ ಮತ್ತಿಹಳ್ಳಿ ವಂಶಸ್ಥರು ಬಂಧು-ಮಿತ್ರರು, ದಾವಣಗೆರೆ.

**ಮೊ: 93410 01299, 98444 43418**




# ನಗರಸಭೆ ಅಧ್ಯಕ್ಷೆ ರೂಪಾ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸೋಲು



ರಾಣೇಬೆನ್ನೂರು, ಮೇ 13- ಸ್ಥಳೀಯ ನಗರಸಭೆ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ ವಿರುದ್ಧ ಸ್ವಪಕ್ಷೀಯರೇ (ಭಾರತೀಯ ಜನತಾ ಪಕ್ಷ) ಅವಿಶ್ವಾಸ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಶುಕ್ರವಾರ ನಗರಸಭೆ ಸಭಾಭವನದಲ್ಲಿ ಜರುಗಿದ ವಿಶೇಷ ಸಾಮಾನ್ಯ ಸಭೆಯಲ್ಲಿ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಯಿತು.

ಸಭೆಯಲ್ಲಿ ಹಾಜರಿದ್ದ 36 (ಶಾಸಕರು ಸೇರಿ) ಸದಸ್ಯರ ಪೈಕಿ ಅವಿಶ್ವಾಸ ನಿರ್ಣಯ ಅಂಗೀಕಾರಗೊಳ್ಳಲು 24 ಸದಸ್ಯರ ಬೆಂಬಲ ಬೇಕಾಗಿತ್ತು. ಆದರೆ ಕೈ ಎತ್ತುವ ಮೂಲಕ ನಡೆದ ಚುನಾವಣೆಯಲ್ಲಿ ಶಾಸಕರು ಸೇರಿದಂತೆ ಕೇವಲ 18 ಸದಸ್ಯರು ಮಾತ್ರ ಅವಿಶ್ವಾಸ ನಿರ್ಣಯದ ಪರವಾಗಿ ಮತ ಚಲಾಯಿಸಿದ್ದರಿಂದ ಅದು 6 ಮತಗಳ ಕೊರತೆಯಿಂದ ಬಿದ್ದು ಹೋಯಿತು.

**ಅವಿಶ್ವಾಸದ ವಿರುದ್ಧ ಮತ ಚಲಾಯಿಸಿದ ಕಾಂಗ್ರೆಸ್:** ಸಭೆಯಲ್ಲಿ ಹಾಜರಿದ್ದ ಕಾಂಗ್ರೆಸ್ ಪಕ್ಷದ 8 ಸದಸ್ಯರು ಅವಿಶ್ವಾಸ ನಿರ್ಣಯದ ವಿರುದ್ಧ ಮತ ಚಲಾಯಿಸುವ ಮೂಲಕ ಆಡಳಿತ ಪಕ್ಷಕ್ಕೆ ತೀವ್ರ ಇರಿಸು ಮುರಿಸು ಉಂಟಾಗುವಂತೆ ಮಾಡಿದರು.

ಬೆಳಗ್ಗೆ 11ರ ಸುಮಾರು ಅಧ್ಯಕ್ಷೆ ಪರವಾಗಿರುವ ಸದಸ್ಯರು ಸಭೆಗೆ ಆಗಮಿಸಿದರು. ನಂತರ ಕಾಂಗ್ರೆಸ್ ಪಕ್ಷದ ಸದಸ್ಯರು (ಜಯಶ್ರೀ ಪಿಸೆ ಹೊರತುಪಡಿಸಿ) ಆಗಮಿಸಿದರು. 11.30ರ ಸುಮಾರು ಶಾಸಕ ಅರುಣಕುಮಾರ ನೇತೃತ್ವದಲ್ಲಿ ಅವಿಶ್ವಾಸ ನಿರ್ಣಯದ ಪರವಾಗಿರುವ ಸದಸ್ಯರು ಒಂದಾಗಿ ಸಭೆಗೆ ಆಗಮಿಸಿದರು.

**ಪುಟ್ಟಪ್ಪ ಮರಿಯಮ್ಮನವರ ಹಂಗಾಮಿ ಅಧ್ಯಕ್ಷರಾಗಿ ಆಯ್ಕೆ:** ನಗರಸಭೆ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯದ ಸಭೆ ಆಗಿದ್ದರಿಂದ ಎಲ್ಲರಿಗೂ ಸಮ್ಮತವಾಗುವಂತೆ ಸಭೆಯ ಹಿರಿಯ ಸದಸ್ಯ ಕಾಂಗ್ರೆಸ್ ಪಕ್ಷದ ಪುಟ್ಟಪ್ಪ ಮರಿಯಮ್ಮನವರ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸಭೆ ನಡೆಸಿಕೊಡುವಂತೆ ಕೋರಲಾಯಿತು.

**ಪ್ರತ್ಯೇಕ ಆಸನಕ್ಕೆ ಮನವಿ :** ಸಭೆ ಪ್ರಾರಂಭವಾಗು ತ್ತಿದ್ದಂತೆ ರೂಪಾ ಚಿನ್ನಿಕಟ್ಟಿ ನೇತೃತ್ವದ ಸಭೆಯಲ್ಲಿ ತಮಗೆ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡುವಂತೆ ಹಂಗಾಮಿ ಅಧ್ಯಕ್ಷ ಪುಟ್ಟಪ್ಪ ಮರಿಯಮ್ಮನವರ ಅವರಿಗೆ ಮನವಿ ಸಲ್ಲಿಸಿದರು. ಆದರೆ ಇದಕ್ಕೆ ಕರ್ನಾಟಕ ಪ್ರಜ್ಞಾವಂತ ಜನತಾ ಪಕ್ಷದ ನಿಂಗರಾಜ ಕೋಡಿಹಳ್ಳಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಒಂದು ಹಂತದಲ್ಲಿ ಈ ವಿಚಾರವಾಗಿ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ ಪರ ಗುಂಪಿನ ಪ್ರಕಾಶ ಬುರಡಿಕಟ್ಟಿ ಹಾಗೂ ನಿಂಗರಾಜ ಕೋಡಿಹಳ್ಳಿ ನಡುವೆ ವಾಗ್ವಾದಕ್ಕೂ ಕಾರಣವಾಯಿತು. ಕೊನೆಗೆ ಈ ವಿಚಾರವನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಲು ಪುಟ್ಟಪ್ಪ ಮರಿಯಮ್ಮನವರ ತಿಳಿಸಿ ಪರಿಸ್ಥಿತಿ ಶಾಂತಗೊಳಿಸಿದರು.

**ಸ್ಟ್ರೇಚರ್‌ನಲ್ಲಿ ಸಭೆಗೆ ಬಂದ ಸದಸ್ಯೆ:** ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಬಿಜೆಪಿ ಸದಸ್ಯೆ ಪ್ರಭಾವತಿ ತಿಳವಳ್ಳಿ ಸ್ಟ್ರೇಚರ್‌ನಲ್ಲಿ ಸಭೆಗೆ ಆಗಮಿಸಿದರು. ಅವಿಶ್ವಾಸ ನಿರ್ಣಯದ ವಿರುದ್ಧ ಮತ ಚಲಾಯಿಸಿದ ಅವರು ಸಭೆ ಮುಗಿದ ಮೇಲೆ ಅಂಬ್ಯುಲೆನ್ಸ್‌ನಲ್ಲಿ ಮನೆಗೆ ತೆರಳಿದರು.

**ಸಭೆ ಮುಕ್ತಾಯಕ್ಕೂ ಮುನ್ನ ತೆರಳಿದ ಬಿಜೆಪಿ ಸದಸ್ಯರು:** ಅವಿಶ್ವಾಸ ಮತಕ್ಕೆ ಸೋಲು ಖಚಿತವಾದ ನಂತರ ಶಾಸಕರ ನೇತೃತ್ವದಲ್ಲಿ ನಿರ್ಣಯದ ಪರವಾಗಿ ಮತ ಚಲಾಯಿಸಿದ ಎಲ್ಲಾ ಸದಸ್ಯರು ಸಭೆಯಿಂದ ನಿರ್ಗಮಿಸಿದರು.

**ಅಭಿಮಾನಿಗಳ ಸಂಭ್ರಮಾಚರಣೆ:** ಅವಿಶ್ವಾಸ ನಿರ್ಣಯಕ್ಕೆ ಸೋಲು ಉಂಟಾಗಿ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ ಮುಂದುವರೆಯುವುದು ಖಚಿತವಾದ ಸುದ್ದಿ ತಿಳಿಯುತ್ತಿದಂತೆ ಅವರ ಅಭಿಮಾನಿಗಳು ನಗರಸಭೆ ಕಚೇರಿ ಹೊರಭಾಗದಲ್ಲಿ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.

**ಮುಂದಿನ ದಿನಗಳಲ್ಲಿ ಉತ್ತಮ ಆಡಳಿತ ನೀಡುವೆ:** ಅವಿಶ್ವಾಸ ನಿರ್ಣಯಕ್ಕೆ ಸೋಲಾದ ನಂತರ ಅಧ್ಯಕ್ಷ ಸ್ಥಾನ ಪುನಃ ಅಲಂಕರಿಸಿದ ರೂಪಾ ಚಿನ್ನಿಕಟ್ಟಿ ಮಾತನಾಡಿ, ನನ್ನ ಅಧಿಕಾರ ಅವಧಿಯಲ್ಲಿ ಏನು ಆಡಳಿತ ಮಾಡಿದ್ದೇನೆ ಅನ್ನುವುದು ಎಲ್ಲಾ ಸದಸ್ಯರಿಗೆ ಗೊತ್ತು, ಅವರ ವಿಶ್ವಾಸದಿಂದ ಇಂದು ವಿಶ್ವಾಸ ಗಳಿಸಿದ್ದೇನೆ. ಕೆಲವೊಂದು ಭಿನ್ನಾಭಿಪ್ರಾಯವಾಗಿದೆ. ಮುಂದಿನ ದಿನಗಳಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಉತ್ತಮ ಆಡಳಿತ ಮಾಡುತ್ತೇನೆ ಎಂದರು.

# ಅವಿಶ್ವಾಸ ನಿರ್ಣಯಕ್ಕೆ ಸೋಲು ಬಿಜೆಪಿ ಕಾರ್ಯಕರ್ತರ ಆಕ್ರೋಶ

**ರಾಣೇಬೆನ್ನೂರು ನಗರಸಭೆ**

ರಾಣೇಬೆನ್ನೂರು, ಮೇ 13- ಪಕ್ಷದ ಆಂತರಿಕ ಒಪ್ಪಂದದಂತೆ ಅಧ್ಯಕ್ಷ ಸ್ಥಾನ ಬಿಟ್ಟು ಕೊಡದ ರೂಪಾ ಚಿನ್ನಿಕಟ್ಟಿ ವಿರುದ್ಧ ಇಂದು ನಡೆದ ಅವಿಶ್ವಾಸ ಮಂಡನೆ ಗೊತ್ತುವಳಿಯಲ್ಲಿ ಸ್ವಪಕ್ಷದ ಸದಸ್ಯರೇ ಕೈ ಜೋಡಿಸದ ಕಾರಣ ಬಿಜೆಪಿ ಕಾರ್ಯಕರ್ತರಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಇದರಿಂದಾಗಿ ಸಂಸದ ಶಿವಕುಮಾರ ಉದಾಸಿ ಹಾಗೂ ಮಾಜಿ ಶಾಸಕ ಜಿ. ಶಿವಣ್ಣನವರ ಪುತ್ರ, ನಗರಸಭೆ ಸದಸ್ಯ ಗುರುರಾಜ ತಿಳವಳ್ಳಿ, ಇವರ ಸಹೋದರ ಸಂಬಂಧಿ ಪ್ರಭಾವತಿ ತಿಳವಳ್ಳಿ ವಿರುದ್ಧ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಕೈಕೊಟ್ಟ ಪಕ್ಷದ ಹಿರಿಯರು:** ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ 24 ಮತಗಳು ಬೇಕಿತ್ತು. ಬಿಜೆಪಿಯ ಎಲ್ಲ ಸದಸ್ಯರು, ಸಂಸದರು ಕೈ ಜೋಡಿಸಿದ್ದರೆ ಇದು ಸರಳವೂ ಆಗುತ್ತಿತ್ತು. ಆದರೆ, ಸಂಸದ ಶಿವಕುಮಾರ ಉದಾಸಿಯವರಿಗೆ ಸಭೆ ಕುರಿತು ಮಾಹಿತಿ ನೀಡಿದ್ದರೂ ಅವರು ಹಾಜರಾಗದೆ ದೂರ ಉಳಿದಿದ್ದರು. ಸಭೆಗೆ ಹಾಜರಾದ ಬಿಜೆಪಿಯ ಮಾಜಿ ಶಾಸಕ ಜಿ. ಶಿವಣ್ಣನವರ ಪುತ್ರ ಗುರುರಾಜ ತಿಳವಳ್ಳಿ ಹಾಗೂ ಇವರ ಸಹೋದರ ಸಂಬಂಧಿ ಪ್ರಭಾವತಿ ತಿಳವಳ್ಳಿ ಕೂಡ ಅವಿಶ್ವಾಸ ನಿರ್ಣಯದ ವಿರುದ್ಧ ಮತ ಚಲಾಯಿಸಿದ್ದು, ಕಾರ್ಯಕರ್ತರ ಆಕ್ರೋಶಕ್ಕೆಗುರಿಯಾಗುವಂತೆ ಮಾಡಿದೆ.

**ಎಂಪಿ ವಿರುದ್ಧ ಆಕ್ರೋಶ:** ಸಂಸದ ಶಿವಕುಮಾರ ಉದಾಸಿ, ಗುರುರಾಜ ತಿಳವಳ್ಳಿ, ಪ್ರಭಾವತಿ ತಿಳವಳ್ಳಿ ಸೇರಿ ಬಾಕಿಯಿರುವ ಎಲ್ಲ ಸದಸ್ಯರು ಕೈ ಜೋಡಿಸಿದ್ದರೆ, ಅವಿಶ್ವಾಸ ನಿರ್ಣಯದಲ್ಲಿ ಪಕ್ಷ ಗೆಲ್ಲುತ್ತಿತ್ತು. ಅಲ್ಲದೆ ಮತ್ತೊಬ್ಬರಿಗೆ ಅಧ್ಯಕ್ಷ ಸ್ಥಾನ ನೀಡಿ, ಎಲ್ಲರಿಗೂ ಸಮಪಾಲು ಎನ್ನುವ ವಿಶ್ವಾಸ ಬಿಜೆಪಿಯಲ್ಲಿ ಬರುತ್ತಿತ್ತು. ಆದರೆ, ಇವರು ಮಾಡಿದ ಪಕ್ಷ ವಿರೋಧಿ ಚಟುವಟಿಕೆ ಯಿಂದ ಪಕ್ಷಕ್ಕೆ ಮುಜುಗುರ ಉಂಟಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಪಕ್ಷದ ಕಾರ್ಯಕರ್ತರು ನಗರದ ಬಿಜೆಪಿ ಕಾರ್ಯಾಲಯದ ಎದುರು ಸಂಸದ ಶಿವಕುಮಾರ ಉದಾಸಿ ಹಾಗೂ ಗುರುರಾಜ ತಿಳವಳ್ಳಿ ವಿರುದ್ಧ ಘೋಷಣೆ ಕೂಗಿದರು.

ಬಿಜೆಪಿಯಿಂದ ಶಾಸಕರು, ಸಚಿವರು ಆಗಿ ಈಗ ಸಂಸದರೂ ಆಗಿದ್ದಾರೆ. ಅಲ್ಲದೆ ಮಾಜಿ ಶಾಸಕರ ಪುತ್ರನಿಗೆ ನಗರಸಭೆ ಟಿಕೆಟ್ ನೀಡಿ ಗೆಲ್ಲಿಸಲಾಗಿದೆ. ಆದರೂ ಅವರೇ ಪಕ್ಷದ ವಿರುದ್ಧ ನಡೆದುಕೊಂಡಿರುವುದು ಸೂಕ್ತವಲ್ಲ. ಪಕ್ಷದಿಂದ ಲಾಭ ಪಡೆದವರಿಂದಲೇ ಪಕ್ಷಕ್ಕೆ ಮೋಸವಾಗಿದೆ. ಆದ್ದರಿಂದ ಹೈಕಮಾಂಡ್ ಕೂಡಲೆ ಸೂಕ್ತ ಕ್ರಮ ಕೈಗೊಂಡು ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಗುರುರಾಜ ತಿಳವಳ್ಳಿ ಹಾಗೂ ಪ್ರಭಾವತಿ ತಿಳವಳ್ಳಿ ಅವರನ್ನು ಸದಸ್ಯ ಸ್ಥಾನದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

### ಸ್ಟ್ರೇಚರ್ ಮೇಲೆ ಬಂದರೂ ವಿರುದ್ಧ ಮತ

ಬೆನ್ನುಹುರಿ ನೋವಿನಿಂದ ಬಳಲುತ್ತಿರುವ ಸದಸ್ಯೆ ಪ್ರಭಾವತಿ ತಿಳವಳ್ಳಿ ಸ್ಟ್ರೇಚರ್ ಮೇಲೆ ಸಭೆಗೆ ಬಂದಾಗ ಎಲ್ಲ ಕಾರ್ಯಕರ್ತರು ಬಿಜೆಪಿ ಪರವಾಗಿ ಬಂದಿದ್ದಾರೆ ಎಂದುಕೊಂಡಿದ್ದರು. ಆದರೆ, ಪ್ರಭಾವತಿ ತಿಳವಳ್ಳಿ ಅವಿಶ್ವಾಸ ನಿರ್ಣಯದ ವಿರುದ್ಧವಾಗಿ ಮತ ಚಲಾಯಿಸಿದ್ದು, ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಯಿತು.

ಪಕ್ಷದ ಎಲ್ಲ ಸದಸ್ಯರಿಗೆ ನ್ಯಾಯ ಒದಗಿಸಿಕೊಡಬೇಕು ಎಂಬ ಉದ್ದೇಶದಿಂದ ಪಕ್ಷದ ಆಂತರಿಕ ಒಪ್ಪಂದದಂತೆ ಅಧ್ಯಕ್ಷರ ವಿರುದ್ಧ ಅವಿಶ್ವಾಸ ಮಂಡನೆಗೆ ಎಲ್ಲ ಸದಸ್ಯರು ಮುಂದಾಗಿದ್ದರು. ಆದರೆ ನಮ್ಮ ಪಕ್ಷದ ಕೆಲ ಸದಸ್ಯರೇ ವಿರೋಧ ವ್ಯಕ್ತಪಡಿಸಿದ್ದರಿಂದ ಹಿನ್ನಡೆಯಾಗಿದೆ.

**- ಅರುಣಕುಮಾರ ಪೂಜಾರ,**
ಶಾಸಕ ರಾಣೇಬೆನ್ನೂರು.

# ಎಲ್.ಐ.ಸಿ. ಷೇರು ಬೆಲೆ 949 ರೂ.ಗಳಿಗೆ ನಿಗದಿ

ನವದೆಹಲಿ, ಮೇ 13 – ಕೇಂದ್ರ ಸರ್ಕಾರ ಎಲ್.ಐ.ಸಿ.ಯ ಷೇರುಗಳ ಬೆಲೆಯನ್ನು 949 ರೂ.ಗಳಿಗೆ ನಿಗದಿ ಪಡಿಸಿದೆ. ಆದರೆ, ಎಲ್.ಐ.ಸಿ. ಷೇರುದಾರರು 889ರೂ. ಹಾಗೂ ಚಿಲ್ಲರೆ ಹೂಡಿಕೆದಾರರು 904 ರೂ.ಗಳಿಗೆ ಷೇರುಗಳನ್ನು ಪಡೆಯಲಿದ್ದಾರೆ.

ಕಳೆದ ಮೇ 9ರಂದು ಎಲ್.ಐ.ಸಿ. ಷೇರುಗಳನ್ನು ಐಪಿಓ ಮೂಲಕ ಮಾರಲಾಗಿತ್ತು. ಮೇ 12ರಂದು ಷೇರುಗಳನ್ನು ಬಿಡ್ಡರ್‌ಗಳಿಗೆ ನೀಡಲಾಗಿತ್ತು. ಸರ್ಕಾರ 22.13 ಕೋಟಿ ಷೇರುಗಳನ್ನು ಮಾರಿದೆ. ಒಟ್ಟಾರೆ ಎಲ್.ಐ.ಸಿ.ಯ ಶೇ.3.5ರ ಪಾಲುಗಾರಿಕೆ ಮಾರಲಾಗಿದೆ.

## ಹರಪನಹಳ್ಳಿಗೆ ನಾಳೆ ಯೋಗ ರಥಯಾತ್ರೆ

ಹರಪನಹಳ್ಳಿ, ಮೇ 13 - ಯೋಗ ಯುಕ್ತ-ರೋಗ ಮುಕ್ತ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಹರಿಹರ ಪಂಚಮಸಾಲಿ ಪೀಠದ ಯೋಗ ಸಿಂಹಾಸನಾಧೀಶ್ವರ, ಶ್ವಾಸಗುರು ಶ್ರಿ ವಚನಾನಂದ ಮಹಾ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಯೋಗ ರಥಯಾತ್ರೆಯು ನಾಡಿದ್ದು ದಿನಾಂಕ 15 ರಂದು ಹಂಪಿಯಲ್ಲಿ ಉದ್ಘಾಟನೆಗೊಂಡು, ಜಿಲ್ಲೆಯಾದ್ಯಂತ ಸಂಚರಿಸಲು ಪ್ರಥಮ ಬಾರಿ ಹರಪನಹಳ್ಳಿಗೆ ಅಂದೇ ಆಗಮಿಸಲಿದೆ. ಸಂಜೆ 5 ಕ್ಕೆ ಪುರ ಪ್ರವೇಶದ ನಂತರ ಐಬಿ ವೃತ್ತದಲ್ಲಿ ಯೋಗ ರಥಯಾತ್ರೆ ಸಮಾವೇಶ 6 ಗಂಟೆಗೆ ನಡೆಯಲಿದೆ.

ಸ್ವಾಮಿಗಳು ಹರಪನಹಳ್ಳಿಯಲ್ಲಿ ವಸತಿ ಮಾಡುವರು. ಇದೇ ದಿನಾಂಕ 16 ರ ಶನಿವಾರ ಬೆಳಿಗ್ಗೆ 6 ಗಂಟೆಯಿಂದ ಯೋಗ ತರಬೇತಿಯನ್ನು ತಾಲ್ಲೂಕು ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಚಾರ ಸಮಿತಿಯ ಎ.ಜಿ. ಮಂಜುನಾಥ, ಯೋಗ ರಥಯಾತ್ರೆ ವ್ಯವಸ್ಥಾಪಕ ಪಾಟೀಲ್ ಬೆಟ್ಟನಗೌಡ, ಹರಪನಹಳ್ಳಿ ಪತಂಜಲಿ ಯೋಗ ಸಮಿತಿ ಅಧ್ಯಕ್ಷ ಹೆಚ್. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಸಭೆಯಲ್ಲಿ ಪತಂಜಲಿ ಉಪಾಧ್ಯಕ್ಷ ಬಿ. ಸುದರ್ಶನ್, ಯೋಗ ರಥಯಾತ್ರೆಯ ವ್ಯವಸ್ಥಾಪಕ ಜೆ. ಓಂಕಾರ ಗೌಡ, ಚನ್ನನಗೌಡ, ಕೊಟ್ರೇಶ್ ಎಸ್, ಸುರೇಶ್ ಶ್ಯಾನುಬೋಗರ, ಪೂಜಾರ ಮಹೇಶ, ಕ್ಷೇತ್ರಪಾಲ ಕೆ. ಹೊಸಪೇಟೆ ಯೋಗ ಸಮಿತಿಯ ಕಿರಣ್ ಕುಮಾರ್, ದಾಕ್ಷಾಯಿಣಿ ಶಿವಕುಮಾರ್, ಪ್ರಮೀಳಮ್ಮ ಮುಂತಾದವರು ಉಪಸ್ಥಿತರಿದ್ದರು.

## ನೀಟ್-ಪಿಜಿ ಪರೀಕ್ಷೆಗೆ ಸುಪ್ರೀಂ ತಡೆಯಿಲ್ಲ

**(1ನೇ ಪುಟದಿಂದ)** ತರಲು ಸರ್ಕಾರ ಪ್ರಯತ್ನ ನಡೆಸುತ್ತಿದೆ ಎಂಬುದನ್ನೂ ನ್ಯಾಯಾಲಯ ಪರಿಗಣಿಸಿದೆ.

# ಹೃದಯಗಳ ನೆಟ್‌ವರ್ಕ್ ಸದಾ ಜಾಗೃತವಾಗಿರಲಿ

**(1ನೇ ಪುಟದಿಂದ)** ಹೆಂಡತಿಯಿಂದ ಮೊಬೈಲ್ ಕರೆ ಬಾರದಿದ್ದರೂ ನನ್ನನ್ನು ಸದಾ ನೆನಪಿಸಿಕೊಳ್ಳುತ್ತಾಳೆ ಎಂಬ ಭಾವನೆ ಗಂಡನ ಮನಸ್ಸಿನಲ್ಲಿರಬೇಕು. ಕುಟುಂಬದವರೆಲ್ಲರಲ್ಲೂ ಈ ಭಾವನೆ ಜಾಗೃತವಾಗಿರಬೇಕು. ಸ್ವಿಚ್‌ಆಫ್ ಆಗಲಿ, ಔಟ್ ಆಫ್ ಕವರೇಜ್ ಏರಿಯಾ ಆಗಬಾರದು ಎಂದು ಹಿತ ನುಡಿದರು.

ಇತ್ತೀಚಿಗೆ ಬೆಂಗಳೂರಿನಲ್ಲಿ ಮೊಬೈಲ್ ಆಪ್ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ 22 ಸಾವಿರ ವಚನಗಳನ್ನು ಅಳವಡಿಸಲಾಗಿದೆ. ಅಂಗೈಯಲ್ಲಿ ಜಗತ್ತು ಎನ್ನುವಂತೆ ಇಡೀ ವಚನ ಸಂಪುಟವೇ ಮೊಬೈಲ್‌ನಲ್ಲಿ ಅಡಗಿದೆ. ಅದರ ಸದ್ಬಳಕೆಯಾಗಬೇಕಿದೆ ಎಂದರು.

ಕಂದಗಲ್ಲು ಗ್ರಾಮದ ಜನರು ಸುಂದರ ದೇಗುಲ ನಿರ್ಮಿಸಿದ್ದೀರಿ, ಅದರಂತೆ ಬದುಕು ಸುಂದರವಾಗಿ ರೂಪುಗೊಳ್ಳಲಿ ಎಂದು ಹೇಳಿದರು.

ಯುವಕರು ಬಾರ್ ಅಂಡ್ ರೆಸ್ಟೋರೆಂಟ್‌ಗಳತ್ತ ಮುಖ ಮಾಡದೇ ದೇವರ ಗುಡಿಗಳತ್ತ ಚಿತ್ತ ಹರಿಸಲಿ. ಆಗ ದೇವಸ್ಥಾನ ನಿರ್ಮಿಸಿದ್ದಕ್ಕೂ ಸಾರ್ಥಕವಾಗುತ್ತದೆ ಎಂದರು.

ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಮಾತನಾಡಿ, ಅಷ್ಟಾವರಣ, ಷಟ್‌ಸ್ಥಲ ಹಾಗೂ ವೀರಶೈವ ಧರ್ಮದ ಅರಿವು ಎಲ್ಲರಲ್ಲೂ ಉಂಟಾಗಬೇಕೆಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ ಮಾತನಾಡಿ, ಯುವ ಜನರು ಉದ್ಯೋಗಕ್ಕಾಗಿ ನಗರಗಳತ್ತ ವಲಸೆ ಹೋಗುತ್ತಿದ್ದಾರೆ. ಹೀಗಾಗಿ ಗ್ರಾಮಗಳೂ ಸಹ ವೃದ್ಧಾಶ್ರಮಗಳಾಗುತ್ತಿವೆ ಎಂದು ವಿಷಾದಿಸಿದರು.

ಚೈತನ್ಯ ತುಂಬಿದ ಯುವ ಜನರಿಂದ ಏನನ್ನಾದರೂ ಸಾಧಿಸಲು ಸಾಧ್ಯವಿದೆ ಎಂದ ಅವರು, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗಡೆ ಅವರು ದೇವಸ್ಥಾನ ನಿರ್ಮಾಣಕ್ಕೆ ಮೂರು ಲಕ್ಷ ರೂ. ದೇಣಿಗೆ ನೀಡಿರುವುದನ್ನು ಸ್ಮರಿಸಿದರು.

ಜಿ.ಪಂ. ಸದಸ್ಯ ಕೆ.ಎಸ್. ಬಸವಂತಪ್ಪ ಮಾತನಾಡಿ, ಕಂದಗಲ್ ಗ್ರಾಮದಲ್ಲಿ ದೇವಸ್ಥಾನವನ್ನು ವಿಶಿಷ್ಟವಾಗಿ ಕೆತ್ತನೆ ಮಾಡಲಾಗಿದೆ. ಮಾಜಿ ಸಚಿವ ಹೆಚ್. ಆಂಜನೇಯ ಅವರು ಹಂಪಿಯಲ್ಲಿ ಇದೇ ಮಾದರಿಯ ಆದಿಜಾಂಬವ ದೇವಸ್ಥಾನವನ್ನು ನಿರ್ಮಿಸುವ ಸಂಕಲ್ಪ ಮಾಡಿದ್ದಾರೆಂದು ತಿಳಿಸಿದರು.

ಭದ್ರಾ ಕಾಡಾ ಸಮಿತಿ ಅಧ್ಯಕ್ಷೆ ಪವಿತ್ರ ರಾಮಯ್ಯ, ತಾ.ಪಂ. ಇಓ ಡಾ. ಮೇಜರ್ ಹರ್ಷ, ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಜಿ. ಬಸವರಾಜಪ್ಪ, ಬೆಸ್ಕಾಂ ಎಇಇ ಎ.ಎನ್. ತೀರ್ಥೇಶ್, ದೇವಸ್ಥಾನ ಸಮಿತಿ ಪದಾಧಿಕಾರಿಗಳಾದ ಎಂ.ಹೆಚ್. ರುದ್ರಪ್ಪ, ಕೆ.ಬಿ. ಪರಮೇಶ್ವರಪ್ಪ, ಬಿ. ರೇವಣಸಿದ್ಧಪ್ಪ, ಎಂ.ಎನ್. ಜಯಣ್ಣ, ಕೆ.ಪಿ. ಪರಮೇಶ್ವರಪ್ಪ, ಕೆ.ಪಿ. ಸೋಮಣ್ಣ ಮತ್ತಿತರರು ಉಪಸ್ಥಿತರಿದ್ದರು.

# ಕಲಿಕಾ ನಷ್ಟ ತುಂಬುವುದೇ ಕಲಿಕಾ ಚೇತರಿಕೆಯ ಉದ್ದೇಶ

## ಹರಪನಹಳ್ಳಿಯ ಸಾ.ಶಿ.ಇಲಾಖೆಯ ಬಳ್ಳಾರಿ ಜಿಲ್ಲಾ ಡಯಟ್‌ನ ಉಪನಿರ್ದೇಶಕರಾದ ಹನುಮಕ್ಕ

ಹರಪನಹಳ್ಳಿ, ಮೇ 13 - ಕೋವಿಡ್ ನಿಂದ ಮಕ್ಕಳು ಕಲಿಕೆಯಿಂದ ಹಿಂದುಳಿದಿದ್ದು ಕಲಿಕಾ ನಷ್ಟ ತುಂಬುವುದೇ ಕಲಿಕಾ ಚೇತರಿಕೆಯ ಉದ್ದೇಶವಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಬಳ್ಳಾರಿ ಜಿಲ್ಲಾ ಡಯಟ್‌ನ ಉಪನಿರ್ದೇಶಕರಾದ ಹನುಮಕ್ಕ ಹೇಳಿದರು.



ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿ ಇದೇ ಪ್ರಥಮ ಬಾರಿಗೆ ಜಾರಿಗೆ ಬಂದಿರುವ ಕಲಿಕಾ ಚೇತರಿಕೆ ಕಾರ್ಯಕ್ರಮದ ತರಬೇತಿ ಚೆನ್ನಾಗಿ ನಡೆಯುತ್ತಿದೆ ಎಂದರು.

ಕೋವಿಡ್ ಹಿನ್ನೆಲೆಯಲ್ಲಿ ಕಲಿಕಾ ಅಂತರವಿದೆ, ಮಕ್ಕಳು ಕಲಿಕ ಸಾಮರ್ಥ್ಯ ಮರೆತಿದ್ದಾರೆ. ಆದ್ದರಿಂದ ಸರ್ಕಾರ ಪುನಃ ಚೇತರಿಕೆ ನೀಡಲು ಮುಂದಾಗಿದೆ ಎಂದು ಹೇಳಿದರು.

1 ರಿಂದ 9ನೇ ತರಗತಿವರೆಗೆ ವಿಷಯ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತದೆ. ನಾಡಿದ್ದು ದಿನಾಂಕ 15 ರೊಳಗೆ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಿಕ್ಷಕರುಗಳಿಗೆ ತರಬೇತಿ ಪೂರ್ಣಗೊಳ್ಳುತ್ತದೆ. ದಿನಾಂಕ 16 ರಂದು ಶಾಲಾ ಪ್ರಾರಂಭದ ದಿನವೇ ಕಲಿಕಾ ಚೇತರಿಕೆ ಕಾರ್ಯಕ್ರಮ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನಗೊಳ್ಳುತ್ತದೆ ಎಂದು ತಿಳಿಸಿದರು.

ತರಬೇತಿಗೆ ಗೈರಾದ ಶಿಕ್ಷಕರಿಗೆ ಬಳ್ಳಾರಿಯಲ್ಲಿ ಎರಡು ದಿನದ ತರಬೇತಿ ನೀಡಲಾಗುತ್ತದೆ. ದಿನಾಂಕ 16 ರಂದು ಮಿಂಚಿನ ಸಂಚಾರದ ಮೂಲಕ ನಮ್ಮ ವಿವಿಧ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ಕಲಿಕಾ ಚೇತರಿಕೆ ಕಾರ್ಯಕ್ರಮ ವನ್ನು ಪರಿಶೀಲಿಸುತ್ತಾರೆ ಎಂದರು.

ದಿನಾಂಕ 16 ರಂದು ಪೋಷಕರು, ಎಸ್‌ಡಿಎಂಸಿ ಸದಸ್ಯರು, ಅಧ್ಯಕ್ಷರ ಸಭೆ ನಡೆಸಿ ಕಲಿಕೆಗೆ ಒತ್ತು ನೀಡಬೇಕು. ಓದು ಕರ್ನಾಟಕ ಕಾರ್ಯಕ್ರಮದ ಅನುಷ್ಠಾನದಲ್ಲಿ ರಾಜ್ಯದಲ್ಲಿಯೇ ಅಖಂಡ ಬಳ್ಳಾರಿ ಜಿಲ್ಲೆ ಪ್ರಥಮ ಸ್ಥಾನದಲ್ಲಿ ಇದೆ. 100 ದಿನಗಳ ಓದು ಆಂದೋಲನಾ ಮುಗಿದಿದೆ. ಕ್ರಿಯಾ ಸಂಶೋಧನೆ ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು.

ಹರಪನಹಳ್ಳಿ ಪ್ರಥಮ - ಟಿ.ಪಿ ಹಾಗೂ ಟಿಡಿ ಕೊಡುವುದರಲ್ಲಿ ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ ಪ್ರಥಮ ಸ್ಥಾನದಲ್ಲಿದೆ ಎಂದು ಅವರು ಮೆಚ್ಚುಗೆ ವ್ಯಕ್ತ ಪಡಿಸಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ, ಜಿಲ್ಲಾ ನೋಡಲ್ ಅಧಿಕಾರಿ ಬಸವರಾಜ ಶಿವಪುರ, ತಾಲ್ಲೂಕು ನೋಡಲ್ ಅಧಿಕಾರಿ ಹುಲಿಬಂಡಿ, ಬಿಆರ್‌ಸಿ ಹುಸೇನ್‌ಪೀರ್, ದೈಹಿಕ ಪರಿವೀಕ್ಷಕ ರೇವಣ್ಣ,ಇಸಿಓ ಗಿರಜ್ಜಿ ಮಂಜುನಾಥ, ಬಿಆರ್‌ಪಿ ಅಣ್ಣಪ್ಪ ಸೇರಿದಂತೆ ಇತರರಿದ್ದರು.

# ಅಂಗನವಾಡಿ ಕಾರ್ಯಕರ್ತೆಯರಿಂದ ಅನಿರ್ದಿಷ್ಟಾವಧಿ ಧರಣಿ ಆರಂಭ



ಬೆಂಗಳೂರು, ಮೇ 13 - ಮಿನಿ ಅಂಗನವಾಡಿ ಕೇಂದ್ರಗಳಿಗೆ ಸಹಾಯಕಿಯರನ್ನು ನೇಮಿಸಬೇಕು ಹಾಗೂ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಸಮಾನ ವೇತನ ಜಾರಿಗೊಳಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿ ಬೆಂಗಳೂರು ಫ್ರೀಡಂ ಪಾರ್ಕಿನಲ್ಲಿ ಮಿನಿ ಅಂಗನವಾಡಿ ಕಾರ್ಯಕರ್ತೆಯರು ಇಂದು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ಎಐಟಿಯುಸಿ ಸಂಯೋಜಿತ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಫೆಡರೇ ಷನ್ ರಾಜ್ಯ ಸಮಿತಿ ಕರೆ ಮೇರೆಗೆ ನಡೆಯುತ್ತಿರುವ ಈ ಧರಣಿ ನೇತೃತ್ವ ವನ್ನು ಅಂಗನವಾಡಿ ಕಾರ್ಯಕರ್ತೆ ಯರ ಹಾಗೂ ಸಹಾಯಕಿಯರ ಫೆಡರೇಷನ್‌ನ ರಾಜ್ಯಾಧ್ಯಕ್ಷ ಎನ್ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ, ರಾಜ್ಯ ಉಪಾಧ್ಯಕ್ಷ ಹೊನ್ನಪ್ಪ ಮರೆಮ್ಮನವರ್, ರಾಜ್ಯ ಸಮಿತಿ ಸದಸ್ಯರಾದ ಗಿರಿಜಾ, ಎಸ್.ಎಸ್. ಮಲ್ಲಮ್ಮ ಮುಂತಾದವರು ವಹಿಸಿದ್ದಾರೆ.

## ರೈಲ್ವೆ : 72 ಸಾವಿರ ಹುದ್ದೆಗಳು ರದ್ದು

**(1ನೇ ಪುಟದಿಂದ)** ಅಗತ್ಯವಿಲ್ಲದಂತಾಗಿದೆ. ಪ್ರಸಕ್ತ ಈ ಹುದ್ದೆಗಳಲ್ಲಿ ಇರುವವರನ್ನು ರೈಲ್ವೆಯ ಬೇರೆ ವಿಭಾಗಗಳಿಗೆ ರವಾನಿಸಲಾಗುತ್ತಿದೆ.

ಆಧುನೀಕರಣ ಹಾಗೂ ಡಿಜಿಟಲೀಕರಣಗಳ ಕಾರಣದಿಂದಾಗಿ 2015-16 ರಿಂದ 2020-21ರ ನಡುವೆ 16 ರೈಲ್ವೆ ವಲಯಗಳು 56,888 ಅಗತ್ಯವಿಲ್ಲದ ಹುದ್ದೆಗಳನ್ನು ಕೈ ಬಿಟ್ಟಿವೆ. 15,495 ಹುದ್ದೆಗಳನ್ನು ಕೈ ಬಿಡಲಾಗುತ್ತಿದೆ.

## 20ರಂದು ಯುವ ವಿಕಲಚೇತನರಿಗಾಗಿ ಉದ್ಯೋಗ ಮೇಳ

ದಾವಣಗೆರೆ, ಮೇ 13 - ಸಮರ್ಥನಂ ಅಂಗವಿಕಲರ ಸಂಸ್ಥೆಯು ಯುವ ವಿಕಲಚೇತನರಿಗಾಗಿ ದಾವಣಗೆರೆ ವಿಭಾಗ ಮಟ್ಟದ ಉದ್ಯೋಗ ಮೇಳವನ್ನು ಇದೇ ದಿನಾಂಕ 20 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆ ವರೆಗೆ ನಗರದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಲಾಗಿದೆ. ಎಸ್ಸೆಸ್ಸೆಲ್ಸಿ ಉತ್ತೀರ್ಣ, ಪಿ.ಯು.ಸಿ, ಡಿಪ್ಲೋಮಾ ಮತ್ತು ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ 18 ವರ್ಷದಿಂದ 35 ವರ್ಷದ ಒಳಗಿನ ವಿಕಲಚೇತನರು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ವಿವರಕ್ಕೆ ಸಮರ್ಥನಂ ಸಹಾಯವಾಣಿ 080 68333999 ಅಥವಾ ಮೊ: 9480812121, 9449864693 ಸಂಪರ್ಕಿಸಬಹುದು ಎಂದು ಸಂಯೋಜಕ ಎಂ. ಶಿವರಾಜು ತಿಳಿಸಿದ್ದಾರೆ.

# ಮನೆ ಬಾಗಿಲಿಗೆ ಪಿಂಚಣಿ ಕಾರ್ಯಕ್ರಮಕ್ಕೆ ಚಾಲನೆ

ಬೆಂಗಳೂರು, ಮೇ 13 - ಅರ್ಹ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ಮನೆ ಬಾಗಿಲಿಗೆ ತಲುಪಿಸುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದ್ದಾರೆ.

ವಿಧಾನಸೌಧದ ಸಭಾಂಗಣದಲ್ಲಿ ನಡೆದ ಹಲೋ ಕಂದಾಯ ಸಚಿವರೇ (72 ಗಂಟೆಗಳಲ್ಲಿ ಮನೆ ಬಾಗಿಲಿಗೆ ಪಿಂಚಣಿ) ಸಹಾಯವಾಣಿಯನ್ನು ಲೋಕಾರ್ಪಣೆ ಮಾಡಿದರು.

ವಾರ್ಷಿಕ ಆದಾಯ 32 ಸಾವಿರರೂಗಿಂತ ಕಡಿಮೆ ಇರುವ ವೃದ್ದರು, ಅಂಗವಿಕಲರು, ವಿಧವೆ, ಅವಿವಾಹಿತರು, ವಿಚ್ಛೇದನ ಪಡೆದ ಮಹಿಳೆಯರು ಈ ಸೌಲಭ್ಯ ಪಡೆಯಲು ಹಲೋ ಕಂದಾಯ ಸಚಿವರೇ ಎನ್ನುವ ದೂರವಾಣಿ 155245ಕ್ಕೆ ಕರೆ ಮಾಡಿದರೆ ಅವರ ಮನೆ ಬಾಗಿಲಿಗೆ 72 ಗಂಟೆಯೊಳಗೆ ಸೌಲಭ್ಯ ದೊರೆಯುತ್ತದೆ. ಈ ಸೌಲಭ್ಯ ಪಡೆಯುವ ಅರ್ಹರು ತಮ್ಮ ಆಧಾರ್ ಕಾರ್ಡ್ ಹಾಗೂ ಬ್ಯಾಂಕ್ ಖಾತೆಯ ಮಾಹಿತಿಯನ್ನು ಜೋಡಣೆ ಮಾಡಬೇಕು.

ಸಮರ್ಪಕವಾಗಿ ದಾಖಲೆಗಳನ್ನು ನೀಡಿದರೆ, 72 ಗಂಟೆಯೊಳಗೆ ಸರ್ಕಾರದ ಈ ಪಿಂಚಣಿ ಸೌಲಭ್ಯ ದೊರೆಯಲಿದೆ ಎಂದು ಮುಖ್ಯಮಂತ್ರಿಯವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಆಸಿಡ್ ದಾಳಿಗೆ ಒಳಗಾಗಿರುವ ಮಹಿಳೆಯರಿಗೆ ನೀಡಲಾಗುತ್ತಿದ್ದ 3 ಸಾವಿರ ಮಾಸಾಶನವನ್ನು 10 ಸಾವಿರ ರೂಪಾಯಿಗೆ ಹೆಚ್ಚಿಸಲಾಗಿದ್ದು, ಸಂತ್ರಸ್ತ ಫಲಾನುಭವಿಗಳಿಗೆ ಪ್ರಮಾಣಪತ್ರ ವಿತರಿಸಿದರು.

## ವಿದ್ಯುತ್ ತಗುಲಿ ರೈತ ಸಾವು

**ರಾಣೇಬೆನ್ನೂರು**

ರಾಣೇಬೆನ್ನೂರು, ಮೇ 13 - ಜಮೀನು ಉಳುಮೆ ಮಾಡುವ ಸಮಯದಲ್ಲಿ ವಿದ್ಯುತ್ ತಗುಲಿ ರೈತನೊಬ್ಬ ಸಾವಿಗೀಡಾಗಿರುವ ಘಟನೆ ತಾಲ್ಲೂಕಿನ ಕೃಷ್ಣಾಪುರ ಗ್ರಾಮದಲ್ಲಿ ಸಂಭವಿಸಿದೆ.

ತಾಲ್ಲೂಕಿನ ಮುಷ್ಟೂರು ಗ್ರಾಮದ ಚನ್ನಬಸಪ್ಪ ಸಿದ್ದಪ್ಪ ಹಿರೇಮಠದ (38) ಮೃತಪಟ್ಟ ರೈತ. ಮೃತನು ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ ವೇಳೆ ವಿದ್ಯುತ್ ತಗುಲಿ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಹಲಗೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


**ಇಪ್ಪತ್ತನೇ ವರ್ಷದ ಪುಣ್ಯಸ್ಮರಣೆ**



ದಿ. ಬಿ.ಎಸ್. ಕರಿಬಸಪ್ಪ ಎ. ಬುಳ್ಳಾಪುರ
ನಿಧನ 14.5.2002




ದಿ. ಹೆಚ್.ಎಂ. ನಾಗರಾಜ್ ಹೆಬ್ಬಾಳ್
ನಿಧನ 14.5.2002

ಹೂವಾಗಿ ಅರಳುವ ಮೊದಲೇ ವಿಧಿಯಾಟಕ್ಕೆ ಬಲಿಯಾದ ಶ್ರಮ ಜೀವಿ **ಶ್ರೀಯುತ ಬಿ.ಎಸ್. ಕರಿಬಸಪ್ಪ** ಮತ್ತು ಸದಾ ಹಸನ್ಮುಖಿಯಾಗಿದ್ದ **ಶ್ರೀ ಹೆಚ್.ಎಂ. ನಾಗರಾಜ್**

ನೀವಿಬ್ಬರೂ ನಮ್ಮನ್ನಗಲಿ ಇಂದಿಗೆ 20 ವರ್ಷಗಳಾದರೂ ನಿಮ್ಮ ಆದರ್ಶಗಳು, ಸ್ನೇಹ, ಶ್ರಮ ಮತ್ತು ವ್ಯಕ್ತಿತ್ವಗಳು ನಮಗೆಲ್ಲಾ ಮಾದರಿಯಾಗಿವೆ. ನಾವುಗಳು ನೀವು ಹಾಕಿಕೊಟ್ಟ ದಾರಿಯಲ್ಲಿ, ನಿಮ್ಮಗಳ ನೆನಪಿನ ದೋಣಿಯಲ್ಲಿ, ಸದಾ ದುಃಖದ ಮಡುವಿನಲ್ಲಿಯೇ ಜೀವನ ಸಾಗಿಸುತ್ತಿರುವ ಕುಟುಂಬ ವರ್ಗವು ನಿಮ್ಮಗಳ ದಿವ್ಯಾತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವ,

**ದುಃಖತಪ್ತ ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು, ಹೆಬ್ಬಾಳು ಮತ್ತು ಎ. ಬುಳ್ಳಾಪುರ, ದಾವಣಗೆರೆ ತಾಲ್ಲೂಕು.**

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ : 10.05.2022ರ ಮಂಗಳವಾರ ನಿಧನರಾದ **ಶ್ರೀ ಮಹೇಶ್ವರ ಸ್ವಾಮಿ ಸೇವಾ ಸಮಿತಿ ಟ್ರಸ್ಟಿ ಆಗಿ ಸೇವೆ ಸಲ್ಲಿಸಿದ್ದ**

**ಶ್ರೀ ಹಾಸಬಾವಿ ಮಲ್ಲಿಕಾರ್ಜುನ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಶ್ರೀಯುತರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಟ್ರಸ್ಟಿಗಳು, ಅಧ್ಯಕ್ಷರು ಮತ್ತು ಸದಸ್ಯರು**
**ಶ್ರೀ ಮಹೇಶ್ವರ ಸ್ವಾಮಿ ಸೇವಾ ಸಮಿತಿ ಟ್ರಸ್ಟ್, ಬಸಾಪುರ.**
**ಶ್ರೀ ಗುರುಸಿದ್ದೇಶ್ವರ ಸ್ವಾಮಿ ಗದ್ದುಗೆ, ಸೇವಾ ಸಮಿತಿ ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮಿ ಗದ್ದುಗೆ ಸೇವಾ ಸಮಿತಿ, ಬಸಾಪುರ, ದಾವಣಗೆರೆ.**

**ಭಾವಪೂರ್ಣ ಶ್ರದ್ಧಾಂಜಲಿ**

ದಿನಾಂಕ : 13.05.2022ರ ಶುಕ್ರವಾರ ನಿಧನರಾದ **ದಾವಣಗೆರೆ ಲೋಕಸಭಾ ಕ್ಷೇತ್ರದ ಜನಪ್ರಿಯ ಮಾಜಿ ಸಂಸದರಾದ ದಿ.ಪೂಜ್ಯ ಶ್ರೀ ಚನ್ನಯ್ಯ ಒಡೆಯರ್ ಅವರ ಧರ್ಮಪತ್ನಿ**

**ಶ್ರೀಮತಿ ಹಾಲಮ್ಮ**



ಅವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಅವರ ಅಗಲಿಕೆಯ ದುಃಖಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುವ.

**ಕುಣೇಬೆಳಕೆರೆ ದೇವೇಂದ್ರಪ್ಪ**
ಕೋಶಾಧ್ಯಕ್ಷರು, ಶ್ರೀ ಕಾಳಿದಾಸ ವಿದ್ಯಾಸಂಸ್ಥೆ (ರಿ.), ಹರಿಹರ.
ನಿರ್ದೇಶಕರು, ಚಂದ್ರಗುಪ್ತ ಮೌರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜು,
ಶ್ರೀ ಕಾಗಿನೆಲೆ ಕನಕ ಗುರು ಪೀಠದ ಶಾಖಾಮಠ, ಬೆಳ್ಳೂಡಿ

# ಕಚ್ಚಾಟ ಬಿಟ್ಟು ಚುನಾವಣೆಗೆ ಸಜ್ಜಾಗಬೇಕು

## ನವೆಂಬರ್‌ನಲ್ಲಿ ರಾಜ್ಯ ಚುನಾವಣೆ ಸಾಧ್ಯತೆ ಹಿನ್ನೆಲೆಯಲ್ಲಿ ನಾಯಕರಿಗೆ ಕಾಂಗ್ರೆಸ್ ಕಿವಿಮಾತು

ಬೆಂಗಳೂರು, ಮೇ 13 - ಗುಜರಾತ್ ಹಾಗೂ ಹಿಮಾಚಲ ಪ್ರದೇಶ ರಾಜ್ಯಗಳ ಜತೆ ಕರ್ನಾಟಕಕ್ಕೂ ನವೆಂಬರ್‌ನಲ್ಲಿ ವಿಧಾನಸಭಾ ಚುನಾವಣೆ ನಡೆಸಲು ಬಿಜೆಪಿ ಮುಂದಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಆಂತರಿಕ ಕಚ್ಚಾಟ ಬಿಟ್ಟು ಚುನಾವಣೆಗೆ ಸಜ್ಜಾಗಿ ಎಂದು ಕಾಂಗ್ರೆಸ್ ವರಿಷ್ಠರು ರಾಜ್ಯ ನಾಯಕರಿಗೆ ಕಿವಿಮಾತು ಹೇಳಿದ್ದಾರೆ.

ರಾಜಸ್ತಾನದ ಉದಯಪುರದಲ್ಲಿ ಆರಂಭವಾಗಿರುವ ಕಾಂಗ್ರೆಸ್ ಪಕ್ಷದ ಮೂರು ದಿನಗಳ ರಾಷ್ಟ್ರೀಯ ಕಾರ್ಯಾಗಾರದ ಮೊದಲ ದಿನವೇ ಬಿಡುವು ಮಾಡಿಕೊಂಡು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್, ಕಾರ್ಯಾಧ್ಯಕ್ಷರಾದ ಸತೀಶ್ ಜಾರಕಿಹೊಳಿ, ಶಾಸಕ ಕೃಷ್ಣಭೈರೇಗೌಡ ಸೇರಿದಂತೆ ಆಯ್ದ ಮುಖಂಡರ ಸಭೆ ನಡೆಸಿ, ಅವಧಿಗೂ ಮುನ್ನ ಕರ್ನಾಟಕದಲ್ಲಿ ಚುನಾವಣೆ ನಡೆಯಲಿದೆ ಎಂದಿದ್ದಾರೆ.

ಒಂದಲ್ಲಾ ಒಂದು ಕಾರಣಕ್ಕೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವೆ ನಡೆಯುತ್ತಿರುವ ಆಂತರಿಕ ಕಲಹ ಪಕ್ಷ ಸಂಘಟನೆ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಇದನ್ನು ರಾಜ್ಯ ಬಿಜೆಪಿ ಸರ್ಕಾರ ಲಾಭವಾಗಿ ಪಡೆದುಕೊಳ್ಳುತ್ತಿದೆ.

ಇದನ್ನು ಗಮನದಲ್ಲಿಟ್ಟುಕೊಂಡೇ ರಾಜ್ಯ ನಾಯಕರಲ್ಲಿರುವ ಅಸಮಾಧಾನ ತಪ್ಪಿಸಲು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣು ಗೋಪಾಲ್ ಹಾಗೂ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ರಣದೀಪ್‌ಸಿಂಗ್ ಸುರ್ಜೆವಾಲಾ, ರಾಜ್ಯ ಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಮುಂದಿಟ್ಟುಕೊಂಡು ಸಭೆ ನಡೆಸಿದರು.

ಕರ್ನಾಟಕದಲ್ಲಿ ಅವಧಿ ಪೂರ್ವ ಚುನಾವಣೆ ನಡೆಸುವ ಯಾವ ಕುರುಹನ್ನು ಬಿಜೆಪಿ ನೀಡದಿದ್ದರೂ ಅದಕ್ಕೆ ಸಂಬಂಧಿಸಿದಂತೆ ರಹಸ್ಯವಾಗಿ ಸಿದ್ಧತೆ ನಡೆಸಿದ್ದು, ಇದನ್ನು ಯಾವ ಕಾರಣಕ್ಕೂ ಲಘುವಾಗಿ ಪರಿಗಣಿಸಬಾರದು ಎಂದು ವರಿಷ್ಠರು ಎಚ್ಚರಿಕೆ ನೀಡಿದ್ದಾರೆ.

**ಎದುರಾಳಿ ಪಕ್ಷ ಸನ್ನದ್ಧ ಸ್ಥಿತಿಯಲ್ಲಿ ಇಲ್ಲದೇ ಇರುವಾಗ ಇದ್ದಕ್ಕಿದ್ದಂತೆ ರಣಾಂಗಣಕ್ಕಿಳಿದು ಗಾಬರಿ ಪಡಿಸುವುದು ಬಿಜೆಪಿಯ ತಂತ್ರ. ಹೀಗಾಗಿ ಯಾವ ಕಾರಣಕ್ಕೂ ಈ ಅಂಶವನ್ನು ಮರೆಯದೇ ಸಜ್ಜಾಗಿ ಎಂದು ಡಿಕೆಶಿ ಹಾಗೂ ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಲಾಗಿದೆ.**

ಗುಜರಾತ್ ಹಾಗೂ ಹಿಮಾಚಲ ಪ್ರದೇಶದಲ್ಲಿ ಈ ವರ್ಷ ನವೆಂಬರ್ ವೇಳೆಗೆ ವಿಧಾನಸಭೆ ಚುನಾವಣೆಗಳು ನಡೆಯಲಿದ್ದು, ಅದೇ ಕಾಲಕ್ಕೆ ಕರ್ನಾಟಕದಲ್ಲೂ ವಿಧಾನಸಭಾ ಚುನಾವಣೆ ನಡೆಸುವುದು ಬಿಜೆಪಿಯ ಲೆಕ್ಕಾಚಾರ.

ಕರ್ನಾಟಕದಲ್ಲಿ ಪ್ರತಿ ದಿನ ಮುಖಂಡರ ನಡುವೆ ಮುಸುಕಿನ ಗುದ್ದಾಟ ನಡೆಯುತ್ತಿರುವ ಕುರಿತು ಹೈಕಮಾಂಡ್‌ಗೆ ಹಲವು ದೂರುಗಳು ಬಂದಿವೆ. ಹಿರಿಯ ನಾಯಕ ಎಂ.ಬಿ.ಪಾಟೀಲ್ ಮತ್ತು ಮಾಜಿ ಸಂಸದೆ ರಮ್ಯಾ ಪ್ರಕರಣ ಇದಕ್ಕೆ ಉದಾಹರಣೆಗಳಷ್ಟೇ.

ನೀವಿಬ್ಬರೂ ಪರಸ್ಪರ ಒಗ್ಗೂಡದೇ ಇದ್ದರೆ ತದ ನಂತರದ ಹಂತದ ನಾಯಕರು ಒಬ್ಬೊಬ್ಬರ ಜತೆ ನಿಂತು ಗುದ್ದಾಡತೊಡಗುತ್ತಾರೆ. ಇದರ ಲಾಭ ಆಡಳಿತಾರೂಢ ಬಿಜೆಪಿಗೆ ದೊರೆಯಲಿದೆ ಎಂದು ವರಿಷ್ಠರು ಈ ನಾಯಕರಿಗೆ ಹೇಳಿದ್ದಾರೆ.

ಈ ಮಧ್ಯೆ ಕೆಪಿಸಿಸಿ ಅಧ್ಯಕ್ಷರು ಕೇವಲ ತಮಗಾಗದ ಬಿಜೆಪಿ ನಾಯಕರ ವಿರುದ್ಧ ಹೋರಾಟ ಮಾಡುತ್ತಾರೆ. ರಮೇಶ್ ಜಾರಕಿಹೊಳಿ, ಕೆ.ಎಸ್.ಈಶ್ವರಪ್ಪ ಮತ್ತು ಈಗ ಡಾ.ಅಶ್ವತ್ಥ ನಾರಾಯಣ್ ಅವರ ವಿರುದ್ಧ ವೈಯಕ್ತಿಕ ಕಾರಣಗಳಿಂದ ದಾಳಿ ಮಾಡುತ್ತಿರುವ ಅವರು ಸರ್ಕಾರದ ಉಳಿದ ಮಂತ್ರಿಗಳ ಬಗ್ಗೆ ಚಕಾರ ಎತ್ತುತ್ತಿಲ್ಲ.

ನಲವತ್ತು ಪರ್ಸೆಂಟ್ ಕಮೀಷನ್ನಿನ ಆರೋಪ ಸರ್ಕಾರದ ವಿರುದ್ಧ ಕೇಳಿ ಬಂದಾಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ರಾಜೀನಾಮೆ ಕೇಳುವ ಕೆಲಸವಾಗಬೇಕಿತ್ತು. ಇದೇ ರೀತಿ ಸರ್ಕಾರದ ಹಲವು ಸಚಿವರ ವಿರುದ್ಧ ಆರೋಪಗಳಿವೆ.

ಆದರೆ, ಇಂತವರ ವಿರುದ್ಧ ಅಧ್ಯಕ್ಷರು ಪರಿಣಾಮಕಾರಿಯಾಗಿ ಹೋರಾಟ ನಡೆಸುತ್ತಿಲ್ಲ ಎಂಬ ದೂರುಗಳು ಬಂದಿದ್ದು, ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಳ್ಳಿ ಎಂದು ವರಿಷ್ಠರು ರಾಜ್ಯ ಅಧ್ಯಕ್ಷರಿಗೆ ಸೂಚಿಸಿದ್ದಾರೆ.

ಕಾರ್ಯತಂತ್ರ ರೂಪಿಸಿ, ಪಕ್ಷದ ಕಾರ್ಯಕರ್ತರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿ ಎಂದು ವರಿಷ್ಠರು ಸಲಹೆ ಮಾಡಿದ್ದಾರೆ.

ಈ ಹಿಂದೆ ರಾಹುಲ್ ಗಾಂಧಿ ಅವರು ಡಿಕೆಶಿ ಹಾಗೂ ಸಿದ್ಧರಾಮಯ್ಯ ಅವರ ಜತೆ ಸಭೆ ನಡೆಸಿ ಒಗ್ಗಟ್ಟಿನ ಮಂತ್ರ ಜಪಿಸಿದ್ದರಾದರೂ ಅದು ನಿರೀಕ್ಷಿತ ಪರಿಣಾಮ ಬೀರಿಲ್ಲ. ಬದಲಿಗೆ ಉಭಯ ನಾಯಕರ ಮಧ್ಯೆ ಮುಸುಕಿನ ಗುದ್ದಾಟ ಮುಂದುವರೆದಿದೆ.

ನಂತರವೂ ಕರ್ನಾಟಕದಲ್ಲಿ ಆಂತರಿಕ ಕಚ್ಚಾಟ ಮುಂದುವರೆದಿರುವ ಹಿನ್ನೆಲೆಯಲ್ಲಿ ರಾಜ್ಯ ನಾಯಕರಿಗೆ ಚುನಾವಣಾ ಅಸ್ತ್ರ ನೀಡಿ, ಒಂದಾಗಿ ಹೋರಾಟ ನಡೆಸಿ ಎಂದು ಹೇಳಿದ್ದಾರೆ.

# ಆಧುನೀಕರಣದ ವ್ಯಾಮೋಹದಿಂದ ಕನ್ನಡ ಕ್ಷೀಣ




ಮಲೇಬೆನ್ನೂರು, ಮೇ 13- ಸಾಮಾಜಿಕ ಜಾಲತಾಣಗಳು ಮತ್ತು ಆಧುನೀಕರಣದ ವ್ಯಾಮೋಹದಿಂದ ಕನ್ನಡ ಕ್ಷೀಣವಾಗುತ್ತಿದೆ ಎಂದು ಕವಿ ಸಾಬಿರ್ ಅಲಿ ಅಭಿಪ್ರಾಯಪಟ್ಟರು.

ಸಮೀಪದ ನಂದಿಗುಡಿ ಗ್ರಾಮದ ಗ್ರಾಮಾಂತರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬುಧವಾರ ತಾಲ್ಲೂಕು ಕಸಾಪ ಆಯೋಜಿಸಿದ್ದ ಶಾಲಾ ಕಾಲೇಜುಗಳ ಅಂಗಳದಲ್ಲಿ ಸಾಹಿತ್ಯೋತ್ಸವ ಹಾಗೂ ಚಂದ್ರಶೇಖರ್ ಶೆಟ್ಟಿ, ಲಲಿತಮ್ಮ ಡಾ. ಚಂದ್ರಶೇಖರ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ, ಕುವೆಂಪು ವೈಚಾರಿಕ ನೆಲೆಗಟ್ಟಿನ ಸಾಹಿತ್ಯವನ್ನು ಸಮಾಜಕ್ಕೆ ನೀಡಿದವರು. ಅವರ ಸಾಹಿತ್ಯದಲ್ಲಿ ಮತೀಯ ವ್ಯವಸ್ಥೆ ವಿರುದ್ಧ ಹೋರಾಟ ಅಡಗಿದೆ ಎಂದರು.

ಮೌಢ್ಯತೆ ಹೊರಟು ಹೋದಾಗ ವಿಶ್ವ ಮಾನವತೆಯ ಸಂದೇಶ ಹೊತ್ತ ಸಾಹಿತ್ಯ ಒಳಹೋಗುತ್ತದೆ. ಇಲ್ಲದಿದ್ದರೆ ಜಡವಾಗಿ ಬರೀ ಛಾಯೆ ಆವರಿಸುತ್ತದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶಿಕ್ಷಕ ಕುಮಾರ್ ಮ್ಯಾಚಿಂಗ್ ಜಗದಲ್ಲಿ ಕನ್ನಡ ಚಿಂತನೆ ಮಾಯವಾಗಿದೆ. ಕಸಾಪ ಅದನ್ನು ಉಳಿಸುತ್ತಾ ಸಾಗಿದೆ ಎಂದರು.

ಕಾಲೇಜು ಪ್ರಾಚಾರ್ಯ ಎಸ್.ಪಿ. ಅರುಣ್‌ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಮಾತನಾಡಿ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಉದಯೋನ್ಮುಖ ಕವಿಗಳಾಗಲು ಪರಿಷತ್ ಪ್ರೋತ್ಸಾಹ ಮತ್ತು ಬಹುಮಾನ ನೀಡುತ್ತಾ ಬಂದಿದೆ ಎಂದರು.

ಲೇಖಕ ವಿ.ಬಿ.ಕೊಟ್ರೇಶಪ್ಪ ಅವರನ್ನು ಸನ್ಮಾನಿಸಲಾಯಿತು. ಕಸಾಪ ಕಾರ್ಯದರ್ಶಿ ಚಿದಾನಂದ ಕಂಚಿಕೇರಿ, ರೇವಣನಾಯ್ಕ್, ಪದಾಧಿಕಾರಿ ರಿಯಾಜ್ ಅಹ್ಮದ್, ನಿ.ಪೂ. ಕಾರ್ಯದರ್ಶಿ ಹೆಚ್.ಎಂ. ಸದಾನಂದ, ಮುಖ್ಯ ಶಿಕ್ಷಕ ರಾಜಾನಾಯ್ಕ್, ನಿ.ಶಿ. ಕೆ.ಟಿ. ಶಿವಾನಂದಪ್ಪ, ಮಲ್ಲಯ್ಯ ಹಾಗೂ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು. ಶ್ವೇತಾ ನೇಕಾರ್ ನಿರೂಪಿಸಿದರು. ಪವಿತ್ರ ವಂದಿಸಿದರು.

# ಆಸಿಡ್ ದಾಳಿಗೊಳಗಾದವರಿಗೆ ನಿವೇಶನ ಅಥವಾ ಮನೆ

(1ನೇ ಪುಟದಿಂದ) ಉದ್ಯೋಗಕ್ಕಾಗಿ 5 ಲಕ್ಷ ರೂಪಾಯಿವರೆಗೆ ಸಹಾಯಧನ ನೀಡಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

ಕಂದಾಯ ದಾಖಲೆಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸುವ ಯೋಜನೆ ಕಾರ್ಯರೂಪಕ್ಕೆ ಬಂದಿದೆ. ಇದರಿಂದ ಜನರ ಅಲೆದಾಟ ತಪ್ಪುತ್ತದೆ. 50 ಲಕ್ಷಕ್ಕಿಂತ ಹೆಚ್ಚು ಕುಟುಂಬಗಳಿಗೆ ಇದರಿಂದ ಉಪಯೋಗವಾಗಲಿದೆ. ಸಾಮಾಜಿಕ ಭದ್ರತಾ ಯೋಜನೆಗಳಡಿಯ ಪಿಂಚಣಿಗಳು ನೇರವಾಗಿ ಮನೆ ಬಾಗಿಲಿಗೆ ಮುಟ್ಟಬೇಕು. ಸಮಾಜದಲ್ಲಿ ಆಶ್ರಯವಿಲ್ಲದವರಿಗೆ, ಸಹಾಯವಿಲ್ಲದವರಿಗೆ ಪಿಂಚಣಿ ನೀಡಲಾಗುತ್ತದೆ. ವಿಧಾನಸಭೆಯಲ್ಲಿ ಅಧಿಕಾರ ಹೆಪ್ಪುಗಟ್ಟಬಾರದು. ಅಧಿಕಾರ ನೇರವಾಗಿ ಜೇನುತುಪ್ಪದಂತೆ ಹರಿಯುವಂತಿರಬೇಕು. ಇಂದಿನ ಕಾರ್ಯಕ್ರಮ ನೇರವಾಗಿ ಜನರಿಗೆ ತಲುಪುವಂಥದ್ದು ಎಂದರು.

ಬಜೆಟ್‌ನಲ್ಲಿ ಸೂಕ್ಷ್ಮಾತಿ ಸೂಕ್ಷ್ಮ ವಿಚಾರಗಳನ್ನು ಹೇಳಲಾಗಿದೆ. ಡಯಾಲಿಸಿಸ್ ಗೆ ಒಳಗಾಗುವವರಿಗೆ 30 ಸಾವಿರ ಇದ್ದ ಡಯಾಲಿಸ್ಸನ್ನು 60 ಸಾವಿರಕ್ಕೆ ಹೆಚ್ಚಿಸಿ ಉಚಿತ ಡಯಾಲಿಸಿಸ್‌ಗೆ ವ್ಯವಸ್ಥೆ ಮಾಡಲಾಗಿದೆ. ಕ್ಯಾನ್ಸರ್ ಚಿಕಿತ್ಸೆಗೆ 11 ಹೊಸ ಕೇಂದ್ರಗಳನ್ನು ಸ್ಥಾಪಿಸಿ ಬಡ ಜನಕ್ಕೆ ಕೀಮೋಥೆರಪಿಯನ್ನು ಈಗ ನೀಡುವುದಕ್ಕಿಂತ ಎರಡು ಪಟ್ಟು ಹೆಚ್ಚಿಸಲಾಗಿದೆ. ಆರೋಗ್ಯ ತಪಾಸಣೆ, 60 ವರ್ಷ ಮೇಲ್ಪಟ್ಟವರಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಕಿವುಡರಿಗೆ ಕಾಕ್ಲಿಯರ್ ಇಂಪ್ಲಾಂಟ್ ಗೆ ವ್ಯವಸ್ಥೆ ಮಾಡಲಾಗಿದೆ. ಮಾನವೀಯತೆ ಇರುವ, ಹೃದಯವಂತ ಆಡಳಿತ ವ್ಯವಸ್ಥೆ ಇರಬೇಕು. ಆಗ ಸಂಕಷ್ಟದಲ್ಲಿರುವವರಿಗೆ ಆತ್ಮವಿಶ್ವಾಸ ಬರುತ್ತದೆ. ಕತ್ತಲಲ್ಲಿರುವವರನ್ನು ಬೆಳಕಿನೆಡೆಗೆ ಕರೆದು ತರುವ ಕೆಲಸ ಮಾಡಬೇಕು ಎಂದರು.

ಇಂದಿನ ಕಾರ್ಯಕ್ರಮ ವಯಸ್ಸಾದವರಿಗೆ, ವಿಧವೆಯರಿಗೆ ಉಪಯೋಗವಾಗಲಿದೆ. ಕಂದಾಯ ದಾಖಲೆಗಳು, ಪಿಂಚಣಿ, ಗ್ರಾಮ ಪಂಚಾಯತ್ ದಾಖಲೆಗಳನ್ನು ನೀಡುವಂಥ ಕೆಲಸವಾಗಿದೆ. ಈ ಮೂಲಕ ಆಡಳಿತದಲ್ಲಿ ಬಹಳ ದೊಡ್ಡ ಜನಪರವಾದ ಸುಧಾರಣೆಯನ್ನು ತರಲಾಗಿದೆ. ಜನರಿಗೋಸ್ಕರ ಇರುವ ಸರ್ಕಾರವಿದು ಎನ್ನುವ ವಿಶ್ವಾಸವನ್ನು ತುಂಬುವ ರೀತಿಯಲ್ಲಿ ಆಡಳಿತದಲ್ಲಿ ಸುಧಾರಣೆ ಮಾಡಲಾಗುತ್ತಿದೆ. ಇನ್ನೂ ಹಲವಾರು ಹೆಜ್ಜೆಗಳ ಪ್ರಯಾಣ ಮಾಡಬೇಕಿದೆ ಎಂದರು.

# ಗುರು- ಶಿಷ್ಯರ ಬಾಂಧವ್ಯಕ್ಕೆ ಸಾಕ್ಷಿಯಾದ ಮಾಯಕೊಂಡದ ಗುರುವಂದನೆ

ಜಿ.ಜಗದೀಶ್ ಮಾಯಕೊಂಡ



**ಗುರುಗಳಿಗೆ ವಂದಿಸಿ, ಸತ್ಕರಿಸಿ, ಅಭಿಮಾನ ಮೆರೆದ ಹಳೆಯ ವಿದ್ಯಾರ್ಥಿಗಳು**

ಮಾಯಕೊಂಡ, ಮೇ 13 - ವೃತ್ತಿಯಿಂದ ನಿವೃತ್ತರಾದರೂ, ದನಿ ಕ್ಷೀಣಿಸಿದ್ದರೂ, ದೇಹಕ್ಕೆ ಮುಪ್ಪಡರಿ ಜೀವನದ ಮುಸ್ಸಂಜೆಯಲ್ಲಿದ್ದರೂ, ಅವರಿಂದ ಶಿಕ್ಷಣ ಪಡೆದು ದಶಕಗಳೇ ಕಳೆದರೂ ಅವರ ಬಗೆಗಿನ ಅಭಿಮಾನ ಕಿಂಚಿತ್ತೂ ಕುಂದದೆಂಬುದನ್ನು ಮಾಯಕೊಂಡದ ಹಳೆಯ ವಿದ್ಯಾರ್ಥಿಗಳು ಸಾದರಪಡಿಸಿದರು.

ತಮ್ಮ ಯಶಸ್ಸಿಗೆ ಭದ್ರ ಅಡಿಪಾಯ ಹಾಕಿದ ಗುರುಗಳ ತಂಡವನ್ನು ಹೂಮಳೆಗರೆದು, ವಾದ್ಯ ಸಮೇತ ಮೆರವಣಿಗೆಯಲ್ಲಿ ಕರೆತಂದು ಅಭಿಮಾನ ದಿಂದ ಸತ್ಕರಿಸಿ, ಶಿಷ್ಯರು ಧನ್ಯತಾಭಾವ ಮೆರೆದರು.

1986-87ನೇ ಸಾಲಿನ ವಿದ್ಯಾರ್ಥಿಗಳು ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಸಭಾಂಗಣ ದಲ್ಲಿ ಕಳೆದ ವಾರ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮ ಗುರು - ಶಿಷ್ಯರ ಬಾಂಧವ್ಯಕ್ಕೆ, ಹಳೆ ವಿದ್ಯಾರ್ಥಿಗಳ ಸಮ್ಮಿಲನಕ್ಕೆ ಸಾಕ್ಷಿಯಾಯಿತು.

ಇಲ್ಲಿ ಓದಿದವರು ಉಪನ್ಯಾಸಕ, ಸಮಾಜ ಸೇವಕ, ವೈದ್ಯ, ಎಂಜಿನಿಯರ್, ರಾಜಕಾರಣಿ, ಉದ್ಯಮಿ, ನೌಕರರುಗಳಾಗಿ ಕೆಲಸದ ಒತ್ತಡ ಜಂಜಾಟದಲ್ಲಿ ಮುಳುಗಿ ಪರಸ್ಪರ ಮುಖಾಮುಖಿಯಾಗದೇ ದಶಕಗಳೇ ಕಳೆದಿದ್ದವು. ಈಚೆಗೆ ನಡೆದ ಗುರು ವಂದನೆ ಎಲ್ಲರನ್ನೂ ಸಮ್ಮಿಲನಗೊಳಿಸಿತು. ಕಾರ್ಯಕ್ರಮದಲ್ಲಿ ಹಳೆಯ ನೆನಪುಗಳ ವರ್ಷಧಾರೆಯೇ ಸುರಿಯಿತು. ಬಹು ದೂರದಿಂದ ಬಂದ ಗುರು, ಶಿಷ್ಯರು ಪರಸ್ಪರ ಕುಟುಂಬದವರನ್ನು ಪರಿಚಯಿಸಿಕೊಂಡು ಯೋಗಕ್ಷೇಮ, ವಿಚಾರಿಸಿದರು. ಕೆಲವರು ಅಂದಿನ ಹುಡುಗಾಟ, ಒಡನಾಟ, ಚೇಷ್ಟೆ ನೆನಪಿಸಿ ತಮ್ಮನ್ನು ಪರಿಚಯಿಸಿಕೊಂಡು ಸಂಭ್ರಮಿಸಿದರು.

ನಿವೃತ್ತ ಶಿಕ್ಷಕರಾದ ಜಿ.ಎನ್. ಬಾಲಕೃಷ್ಣ, ಇ.ಸಿ.ಚಂದ್ರಶೇಖರ್, ಗುರುಶಾಂತಪ್ಪ, ಬಿ. ಎಲ್. ಸೀತಾರಾಮ ಚಾರ್, ವೈ.ಎಸ್ ರುದ್ರಸ್ವಾಮಿ, ಜಿ.ಬಸವರಾಜ್ ಮಾತನಾಡಿ, ತಾವು ಸೇವೆಗೆ ಮಾಯಕೊಂಡಕ್ಕೆ ಬಂದಿದ್ದಾಗಿನಿಂದ ಹಿಡಿದು ಆ ಕಾಲದ ಬಸ್‌ನ ಅವ್ಯವಸ್ಥೆ, ವಸತಿ ವ್ಯವಸ್ಥೆಗಳು, ಜನರ ಪ್ರೀತಿ, ವಿಶ್ವಾಸ ಕಣ್ಮುಂದೆ ಕಟ್ಟಿದಂತೆ ಬಿಚ್ಚಿಟ್ಟರು. ತಾವು ಮಾಯಕೊಂಡಕ್ಕೆ ವರ್ಗಾವಣೆಯಾಗಿ ಬಂದಾಗ ನಡೆದ ಕೆಲ ಆಕಸ್ಮಿಕ ಘಟನೆ, ಪರದಾಟ ನೆನಪಿಸಿಕೊಂಡರು. ಊರಿಗೆ ಅಂದು ಇದ್ದ ಕೆಟ್ಟ ಹೆಸರು ಕೇಳಿ ಊರಿಗೆ ಬರಲು ಹೆದರಿದವರು, ವರ್ಗಾವಣೆಯಾದಾಗ ಮಾಯಕೊಂಡ ಬಿಟ್ಟು ಹೋಗಲಾರದೇ ಒದ್ದಾಡಿದ ಘಟನೆ ನೆನಪಿಸಿಕೊಂಡಾಗ ಕಣ್ಣಾಲೆಗಳು ತೇವಗೊಂಡವು.

ತಮ್ಮಿಂದ ಹೊಡೆತ ತಿಂದವರು ಇಂದು ಉನ್ನತ ಹುದ್ದೆಯಲ್ಲಿರುವುದು ನೆನೆದು ಸಂತೋಷಪಟ್ಟರು. ವಾಲಿಬಾಲ್, ಕಬಡ್ಡಿ ಪಂದ್ಯಾವಳಿ ನಡೆಸಿದ್ದು, ಆಗ ಊಟೋಪಚಾರ ವ್ಯವಸ್ಥೆ ಮಾಡಿದ ಗ್ರಾಮಸ್ಥರ ಉದಾರತೆ ನೆನಪಿಸಿ, ಮಾಯಕೊಂಡದ ಗತವೈಭವ ಸ್ಮರಿಸಿದರು.

ಒದ್ದು, ಬೈದು ತಿದ್ದಿದ್ದರಿಂದ ನಾವು ಒಳ್ಳೆ ಸ್ಥಾನಮಾನ ಪಡೆಯಲು ಸಾಧ್ಯವಾಯಿತು. ನಿಮ್ಮ ಕಾಲಕ್ಕೆ ಅಂಥಾ ಬದ್ದತೆ ಕಣ್ಮರೆಯಾಗಿದೆ. ಈಗೆಲ್ಲಿ ನಿಮ್ಮಂಥವರು ಸಿಗುತ್ತಾರೆ ಎಂದು ಶಿಷ್ಯರು, ವರ್ತಮಾನದ ದುರವಸ್ಥೆಗೆ ವಿಷಾದಿಸಿದರು.

ಗುರುಗಳನ್ನು ಸನ್ಮಾನಿಸಲು ಪಕ್ಕದೂರುಗಳಿಂದಲೂ ಬಂದ ಹಳೆಯ ವಿದ್ಯಾರ್ಥಿಗಳು, ಮುಖಂಡರು ಮುಗಿಬಿದ್ದರು. ನಮ್ಮೂರನ್ನು ನಮ್ಮನ್ನು ಮರೆಯದೇ ಆಗಾಗ ಬರಬೇಕು ಎಂದು ಪ್ರೀತಿಯಿಂದ ಒತ್ತಾಯಿಸಿದರು. ಕಾರ್ಯಕ್ರಮ ಆಯೋಜಿಸಿದ ಆರ್.ನಾಗರಾಜ್, ಎಚ್. ಉಮಾಪತಿ, ತಿಪ್ಪೇಸ್ವಾಮಿ ಮತ್ತಿತರರು ನಮ್ಮೆಲ್ಲರ ಶ್ರೇಯಸ್ಸಿಗೆ ಇಂಥ ಶಿಕ್ಷಕರೇ ಕಾರಣ. ಇವರ ಸ್ಮರಣೆಯೇ ನಮ್ಮ ಭಾಗ್ಯ ಎಂದು ಕೊಂಡಾಡಿದರು.

ಕಲಾವಿದ ಹಾಲೇಶ್ ಗೀತಗಾಯನ, ತಾಲ್ಲೂಕು ಕಸಾಪ ಅಧ್ಯಕ್ಷರಾದ ಸುಮತಿ ಜಯಪ್ಪ ಅವರ ನಿರೂಪಣೆ ಗಮನ ಸೆಳೆಯಿತು.

**ಜಿ.ಬಸವರಾಜ್, ಇಲ್ಲಿ ಕೆಲಸಕ್ಕೆ ಬಂದಾಗ ನಾನು ಸಣಕಲನಾಗಿದ್ದು, ವಿದ್ಯಾರ್ಥಿಯಂತೆಯೇ ಕಾಣುತ್ತಿದ್ದೆ, ಹೀಗಾಗಿ ವಿದ್ಯಾರ್ಥಿಯೊಬ್ಬ ಫ್ರೆಂಡ್ ಅಂಥಾ ತಿಳಿದು, ನನ್ನ ಹೆಗಲ ಮೇಲೆ ಕೈಹಾಕಿದ ಪ್ರಸಂಗ ವಿವರಿಸಿದರು. ತಮ್ಮ ತಾಯಿಯ ತ್ಯಾಗ ನೆನೆದು ಪ್ರಾಚಾರ್ಯ ಬಸವರಾಜ್ ಗದ್ಗದಿತರಾದರು.**

## ಜ್ಞಾನವಾಪಿ ಸಮೀಕ್ಷೆ : ಆದೇಶ ಹೊರಡಿಸಿದ ನ್ಯಾಯಮೂರ್ತಿಗೆ ಸುರಕ್ಷತೆ ಕಳವಳ

ವಾರಣಾಸಿ, ಮೇ 13 – ತಮ್ಮ ಹಾಗೂ ಕುಟುಂಬದ ಸುರಕ್ಷತೆ ಬಗ್ಗೆ ಕಳವಳ ಇದೆ ಎಂದು ವಾರಣಾಸಿಯ ಜ್ಞಾನವಾಪಿ ಶೃಂಗಾರ ಗೌರಿ ಸಂಕೀರ್ಣದ ವಿಡಿಯೋ ಸಮೀಕ್ಷೆಗೆ ಆದೇಶ ಹೊರಡಿಸಿದ್ದ ನ್ಯಾಯಮೂರ್ತಿ ತಿಳಿಸಿದ್ದಾರೆ.

ಸಿವಿಲ್ ನ್ಯಾಯಮೂರ್ತಿ ರವಿ ಕುಮಾರ್ ದಿವಾಕರ್ ಅವರು ಜ್ಞಾನವಾಪಿ ಮಸೀದಿ ಸೇರಿದಂತೆ, ಜ್ಞಾನವಾಪಿ ಸಂಕೀರ್ಣದ ವಿಡಿಯೋ ಸಮೀಕ್ಷೆಗೆ ಆದೇಶಿಸಿದ್ದರು. ವಿಡಿಯೋ ಸಮೀಕ್ಷೆಗಾಗಿ ನೇಮಿಸಲಾಗಿದ್ದ ವಕೀಲ, ಆಯುಕ್ತರನ್ನು ಬದಲಿಸಬೇಕು ಎಂಬ ಮನವಿಯನ್ನು ಅವರು ತಳ್ಳಿ ಹಾಕಿದ್ದರು. ಸಿವಿಲ್ ಪ್ರಕರಣವನ್ನು ಅಸಾಮಾನ್ಯ ಪ್ರಕರಣವಾಗಿ ಪರಿವರ್ತಿಸುವ ಮೂಲಕ ಭೀತಿಯ ವಾತಾವರಣ ಸೃಷ್ಟಿಸಲಾಗಿದೆ ಎಂದು ಪ್ರಕರಣದ ಆದೇಶ ನೀಡುವಾಗ ಹೇಳಿದ್ದಾರೆ.

ನನ್ನ ಕುಟುಂಬದವರಿಗೆ ನನ್ನ ಸುರಕ್ಷತೆ ಬಗ್ಗೆ ಚಿಂತೆ ಇದೆ. ನನಗೂ ಕುಟುಂಬದವರ ರಕ್ಷಣೆ ಬಗ್ಗೆ ಚಿಂತೆ ಇದೆ ಎಂದು ನ್ಯಾಯಮೂರ್ತಿ ತಿಳಿಸಿದ್ದಾರೆ. ಮಸೀದಿ ಸಂಕೀರ್ಣದ ಎರಡು ನೆಲಮಹಡಿಗಳ ವಿಡಿಯೋ ಚಿತ್ರೀಕರಣಕ್ಕೂ ನ್ಯಾಯಮೂರ್ತಿ ಆದೇಶಿಸಿದ್ದರು. ಮಸೀದಿ ವಿಡಿಯೋ ಚಿತ್ರೀಕರಣಕ್ಕೆ ಸಲ್ಲಿಸಲಾಗಿದ್ದ ಆಕ್ಷೇಪಗಳನ್ನು ನ್ಯಾಯಮೂರ್ತಿ ತಳ್ಳಿ ಹಾಕಿದ್ದರು.

## ಜ್ಞಾನವಾಪಿ ವಿಡಿಯೋ ಸಮೀಕ್ಷೆ ತಡೆಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಮೇ 13 – ಉತ್ತರ ಪ್ರದೇಶದ ವಾರಣಾಸಿಯ ಜ್ಞಾನವಾಪಿ ಶೃಂಗಾರ ಗೌರಿ ಸಂಕೀರ್ಣದ ವಿಡಿಯೋ ಸಮೀಕ್ಷೆಗೆ ಮಧ್ಯಂತರ ತಡೆಯಾಜ್ಞೆ ಹೊರಡಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಆದರೆ, ಜ್ಞಾನವಾಪಿ ಮಸೀದಿ ಆವರಣದ ಒಳಗೆ ವಿಡಿಯೋ ಸಮೀಕ್ಷೆ ನಡೆಸಬಾರದು ಎಂದು ಮುಸ್ಲಿಮ್ ಪಾರ್ಟಿ ಒಬ್ಬರು ದಾಖಲಿಸಿರುವ ಅರ್ಜಿಯ ವಿಚಾರಣೆಗೆ ನ್ಯಾಯಾಲಯ ಸಮ್ಮತಿಸಿದೆ.

ಮುಖ್ಯ ನ್ಯಾಯಮೂರ್ತಿಗಳಾದ ಎನ್.ವಿ. ರಮಣ ಹಾಗೂ ನ್ಯಾಯಮೂರ್ತಿಗಳಾದ ಜೆ.ಕೆ. ಮಹೇಶ್ವರಿ ಮತ್ತು ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಪೀಠದ ಎದುರು ಹಾಜರಾದ ಹಿರಿಯ ವಕೀಲ ಹುಜೆಫ್ ಅಹಮದಿ, ಸಮೀಕ್ಷೆ ತಡೆಯುವಂತೆ ಅರ್ಜಿ ದಾಖಲಿಸಿದ್ದರು.

# ಅಡುಗೆಯವನ ಹತ್ಯೆ : 27 ವರ್ಷಗಳ ನಂತರ ವಾಯುಪಡೆಯ ಮೂವರಿಗೆ ಶಿಕ್ಷೆ

ನವದೆಹಲಿ, ಮೇ 13- ಇಪ್ಪತ್ತೇಳು ವರ್ಷಗಳ ಹಿಂದೆ ನಡೆದ ಕಸ್ಟಡಿ ಹತ್ಯೆಗೆ ಸಂಬಂಧಿಸಿದಂತೆ ವಾಯುಪಡೆಯ ಮೂವರಿಗೆ ಅಹಮದಾಬಾದ್‌ನ ವಿಶೇಷ ಸಿಬಿಐ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಇವರಲ್ಲಿ ಇಬ್ಬರು ನಿವೃತ್ತರಾಗಿದ್ದರೆ, ಓರ್ವ ಉದ್ಯೋಗದ ಲ್ಲಿದ್ದಾನೆ.

ಜಾಮ್ನಗರ ವಾಯುಪಡೆ ಕೇಂದ್ರದಲ್ಲಿ ಅಡುಗೆಯವರಾಗಿದ್ದ ಗಿರಿಜಾ ರಾವತ್ ಅವರನ್ನು ನವೆಂಬರ್ 1995ರಲ್ಲಿ ಹಿಂಸಿಸಿ ಹತ್ಯೆಗೈಯ್ಯಲಾಗಿತ್ತು. ಕ್ಯಾಂಟೀನ್‌ನಲ್ಲಿದ್ದ ಮದ್ಯ ಕದ್ದ ಶಂಕೆಯ ಮೇಲೆ ಹತ್ಯೆ ಮಾಡಲಾಗಿತ್ತು.

ಆಗ ಸ್ಕ್ವಾಡ್ರನ್ ಲೀಡರ್ ಆಗಿದ್ದ ಅನೂಪ್ ಸೂದ್ ಹಾಗೂ ಆಗ ಸಾರ್ಜೆಂಟ್‌ಗಳಾಗಿದ್ದ ಅನಿಲ್ ಕೆ.ಎನ್. ಹಾಗೂ ಮಹೇಂದ್ರ ಸಿಂಗ್ ಶೆರಾವತ್ ದೋಷಿಗಳೆಂಬುದು ಸಾಬೀತಾಗಿದೆ. ಶೆರಾವತ್ ಹೊರತುಪಡಿಸಿ ಉಳಿದ ಇಬ್ಬರು ನಿವೃತ್ತರಾಗಿದ್ದಾರೆ. ರಾವತ್ ಪತ್ನಿ ಗುಜರಾತ್ ಹೈಕೋರ್ಟ್ ನಲ್ಲಿ ಅರ್ಜಿ ಸಲ್ಲಿಸಿದ ನಂತರ ಫೆಬ್ರವರಿ 22, 2012ರಂದು ಸಿ.ಬಿ.ಐ. ಈ ಪ್ರಕರಣವನ್ನು ಕೈಗೆತ್ತಿಕೊಳ್ಳಲು ತಿಳಿಸಲಾಗಿತ್ತು.

ನವೆಂಬರ್ 13, 1995ರಲ್ಲಿ ರಾವತ್ ಮನೆ ಶೋಧಿಸಿದ್ದ ಅನೂಪ್ ಸೂದ್, ಬಲವಂತವಾಗಿ ರಾವತ್ ಎಳೆದೊಯ್ದು ಮದ್ಯ ಕದ್ದಿರುವುದನ್ನು ಒಪ್ಪುವಂತೆ ಮಾಡಿದ್ದಾಗಿ ಸಿ.ಬಿ.ಐ. ವಕ್ತಾರ ಆರ್.ಸಿ. ಜೋಷಿ ತಿಳಿಸಿದ್ದಾರೆ. ಸಂಜೆ ಪತಿಯನ್ನು ಬಿಡಿಸಿಕೊಳ್ಳಲು ರಾವತ್ ಪತ್ನಿ ತೆರಳಿದ್ದರು. ಶೀಘ್ರದಲ್ಲೇ ಬಿಡುವುದಾಗಿ ಪತ್ನಿಗೆ ತಿಳಿಸಲಾಗಿತ್ತು. ಆದರೆ, ಆರೋಪಿಗಳು ರಾವತ್‌ಗೆ ಹಿಂಸೆ ನೀಡಿ ಹತ್ಯೆ ಮಾಡಿದ್ದಾಗಿ ದೂರು ನೀಡಲಾಗಿತ್ತು.

# ಸೊಳ್ಳೆ ಉತ್ಪತ್ತಿ ತಡೆಗಟ್ಟಿದರೆ ಡೆಂಗ್ಯೂ ಮುಕ್ತ ತಾಲ್ಲೂಕು

## ಹರಿಹರ: ಡೆಂಗ್ಯೂ ಮುನ್ನೆಚ್ಚರಿಕಾ ಸಭೆಯಲ್ಲಿ ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಕರೆ



ಹರಿಹರ, ಮೇ 13 - ತಾಲ್ಲೂಕಿನ ಜನತೆ ತಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೊಳ್ಳೆ ಉತ್ಪತ್ತಿ ತಡೆಗಟ್ಟಿದರೆ ಡೆಂಗ್ಯೂ ಜ್ವರ ನಿಯಂತ್ರಿಸಿ, ಡೆಂಗ್ಯೂ ಮುಕ್ತ ತಾಲ್ಲೂಕು ಮಾಡಬಹುದು ಎಂದು ತಹಶೀಲ್ದಾರ್ ಡಾ. ಎಂ.ಬಿ. ಅಶ್ವತ್ಥ್ ಹೇಳಿದರು.

ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ತಾಲ್ಲೂಕು ಆಡಳಿತ, ಆರೋಗ್ಯ ಇಲಾಖೆ ಮತ್ತು ನಗರಸಭೆ ವತಿಯಿಂದ ನಡೆದ ಡೆಂಗ್ಯೂ ಜ್ವರ ನಿಯಂತ್ರಣ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹರಿಹರ ತಾಲ್ಲೂಕಿನಲ್ಲಿ ಭತ್ತದ ಬೆಳೆಯನ್ನು ಹೆಚ್ಚಾಗಿ ಬೆಳೆಯುವುದರಿಂದ, ಮುಂಗಾರು ಮಳೆ ಸಮಯದಲ್ಲಿ ಪ್ರಕೃತಿಯಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಈ ಸಮಯದಲ್ಲಿ ಸೊಳ್ಳೆಗಳು ಜಾಸ್ತಿ ಉತ್ಪತ್ತಿ ಆಗುತ್ತವೆ. ಆದ್ದರಿಂದ ಸಾರ್ವಜನಿಕರು ತಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛ ಇರುವಂತೆ ನೋಡಿಕೊಳ್ಳಬೇಕು ಜೊತೆಗೆ ತಮಗೆ ಯಾವುದೇ ರೀತಿಯ ಜ್ವರ, ತಲೆನೋವು, ಕೆಮ್ಮು, ಶೀತ ಮುಂತಾದ ರೋಗ ಬಂದಾಗ ತಕ್ಷಣವೇ ರಕ್ತ ಪರೀಕ್ಷೆ ಮಾಡಿಸಿ ಸೂಕ್ತ ಚಿಕಿತ್ಸೆ ಪಡೆಯಲು ಮುಂದಾಗಬೇಕು ಎಂದು ಹೇಳಿದರು.

ತಾಲ್ಲೂಕು ಆರೋಗ್ಯ ಇಲಾಖೆಯ ಅಧಿಕಾರಿ ಡಾ ಚಂದ್ರಮೋಹನ್ ಮಾತನಾಡಿ, ಡೆಂಗ್ಯೂ ಕಾಯಿಲೆಯ ಕೀಟ ಸಣ್ಣದು ಆದರೆ ಕಾಟ ದೊಡ್ಡದು. ಡೆಂಗ್ಯೂ ಜ್ವರವು ಡೆಂಗ್ಯೂ ವೈರಸ್‌ನಿಂದ ಉಂಟಾಗುವ ಕಾಯಿಲೆ. ಸೋಂಕು ಹೊಂದಿದ ಈಡಿಸ್ ಜಾತಿ ಸೊಳ್ಳೆಯ ಕಡಿತದಿಂದ ಈ ರೋಗವು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಮನುಷ್ಯನಿಗೆ ಇದ್ದಕ್ಕಿದ್ದಂತೆ ಜ್ವರ, ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು, ಬಾಯಿ, ಮೂಗು, ಮತ್ತು ಒಸಡುಗಳಿಂದ ರಕ್ತಸ್ರಾವ, ಚರ್ಮದ ಮೇಲೆ ರಕ್ತಸ್ರಾವದ ಗುರುತುಗಳು ಕಾಣಿಸಿಕೊಳ್ಳುತ್ತವೆ. ಈ ರೋಗಕ್ಕೆ ನಿರ್ದಿಷ್ಟವಾದ ಚಿಕಿತ್ಸೆ ಇರುವುದಿಲ್ಲ. ರೋಗ ಲಕ್ಷಣದ ಅನುಸಾರದ ಮೇಲೆ ಚಿಕಿತ್ಸೆ ನೀಡಲಾಗುತ್ತದೆ. ಈ ಸೊಳ್ಳೆ ಹಗಲು ಸಮಯದಲ್ಲಿ ಕಚ್ಚುತ್ತದೆ ಮತ್ತು ಸ್ವಚ್ಛತೆ ಇರುವ ನೀರಿನಲ್ಲಿ ಸೊಳ್ಳೆ ಮೊಟ್ಟೆ ಇಡುತ್ತದೆ. ಆದ್ದರಿಂದ ಸಾರ್ವಜನಿಕರು ರಾತ್ರಿ ವೇಳೆ ಮಾತ್ರವಲ್ಲದೆ, ಹಗಲಿನಲ್ಲಿಯೂ ಸಹ ಸೊಳ್ಳೆ ಪರದೆಯನ್ನು ಮತ್ತು ಸೊಳ್ಳೆ ನಿಯಂತ್ರಣ ಕಾಯಲ್ ಬಳಸಬೇಕು. ಮನೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ಮತ್ತು ಅವುಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಸ್ವಯಂ ರಕ್ಷಣಾ ವಿಧಾನಗಳನ್ನು ಅನುಸರಿಸುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಬಹುದು ಮತ್ತು ಸೊಳ್ಳೆಗಳಿಂದ ಹರಡುವ ರೋಗಗಳನ್ನು ತಡೆಗಟ್ಟಬಹುದು ಎಂದು ಹೇಳಿದರು.

ಪೌರಾಯುಕ್ತ ಐ. ಬಸವರಾಜ್ ಮಾತನಾಡಿ ನಗರದಲ್ಲಿ ಎಲ್ಲಾ ಕಡೆಗಳಲ್ಲಿ ಸ್ವಚ್ಛತೆಯಿಂದ ಇರುವುದಕ್ಕೆ ಬೇಕಾಗುವ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುವುದು. ನಗರದ ಕಸ ಸಾಗಣೆ ಮಾಡುವ ವಾಹನಗಳಲ್ಲಿ ಜನರಿಗೆ ತಿಳುವಳಿಕೆ ಹೇಳುವುದರ ಮೂಲಕ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ನಾಗರಾಜ್, ಸುಧಾ ಸೂಳಾಖೆ, ಡಾ. ತಿಪ್ಪೇಸ್ವಾಮಿ, ದಾದಾಪೀರ್, ಟಿ.ಎಂ. ನಾಗರಾಜ್, ಬಿ.ಜಿ. ಶಿವರುದ್ರಪ್ಪ, ರೇಖಾ, ನಸ್ರುತ್ ಪರ್ವೀನ್ , ಟಿ. ರಂಗಪ್ಪ, ಮಧು ಟಿ, ಗುರುಪ್ರಸಾದ್, ಶಶಿಕುಮಾರ್, ಪೂರ್ಣಿಮ, ಮಂಜುನಾಥ್, ಕವಿತಾ, ನಿರ್ಮಲ, ಹೆಚ್.ಜಿ. ಹೇಮಂತ್ ಕುಮಾರ್ ಹಾಗು ಇತರರು ಹಾಜರಿದ್ದರು.

## ಗ್ರಾಮಲೆಕ್ಕಾಧಿಕಾರಿಗಳ ರಾಜ್ಯ ಸಮಾವೇಶ

**ನಗರದಲ್ಲಿ ಇಂದು**

ಕರ್ನಾಟಕ ರಾಜ್ಯ ಗ್ರಾಮ ಲೆಕ್ಕಾಧಿಕಾರಿಗಳ ಕೇಂದ್ರ ಸಂಘದ ವತಿಯಿಂದ ಗ್ರಾಮ ಆಡಳಿತ ಅಧಿಕಾರಿ ಬೇಡಿಕೆ ಘೋಷಣೆಗಾಗಿ ಗ್ರಾಮ ಲೆಕ್ಕಾಧಿಕಾರಿಗಳ ರಾಜ್ಯ ಮಟ್ಟದ ಬೃಹತ್ ಸಮಾವೇಶ ಹಮ್ಮಿಕೊಂಡಿರುವುದಾಗಿ ಸಂಘದ ರಾಜ್ಯಾಧ್ಯಕ್ಷ ಬಿ.ದೊಡ್ಡಬಸಪ್ಪ ರೆಡ್ಡಿ ತಿಳಿಸಿದ್ದಾರೆ.

ನೂತನ ಕಾಲೇಜು ಬಳಿಯ ಮೈದಾನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಸಮಾವೇಶವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿಶೇಷ ಆಹ್ವಾನಿತರಾಗಿ ಕಂದಾಯ ಸಚಿವ ಆರ್.ಅಶೋಕ್ ಆಗಮಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಸೇರಿದಂತೆ ಜಿಲ್ಲೆಯ ಶಾಸಕರುಗಳು, ಅಧಿಕಾರಿಗಳು ಆಗಮಿಸಲಿದ್ದಾರೆ.

## 19ರಂದು ಎಸ್ಸೆಸ್ಸೆಲ್ಸಿ ಫಲಿತಾಂಶ

(1ನೇ ಪುಟದಿಂದ) ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಶೇ. 10 ರಷ್ಟು ಗ್ರೇಸ್ ಮಾರ್ಕ್ ನೀಡಿ, ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡಲು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿ ತೀರ್ಮಾನಿಸಿದೆ.


**ರಿಯಾಯಿತಿ ಶಾಲಾ ಶುಲ್ಕ**

**ಎಂಇಎಸ್ ಕಾನ್ವೆಂಟ್ ಆಂಗ್ಲ ಮಾಧ್ಯಮ**

ಎಲ್ ಕೆ ಜಿ ಯಿಂದ ದ್ವಿತೀಯ ಪಿಯುಸಿ ವರೆಗೂ ಪ್ರವೇಶ ಪ್ರಾರಂಭವಾಗಿದೆ.

ಶುಲ್ಕ ರಿಯಾಯಿತಿಯೊಂದಿಗೆ ಕಂತಿನ ವ್ಯವಸ್ಥೆ ಇರುತ್ತದೆ. ಸ್ವಚ್ಛ ತರಗತಿ, ಗ್ರಂಥಾಲಯ, ಪ್ರಯೋಗಾಲಯ, ಯೋಗ, ಧ್ಯಾನದ ತರಗತಿಗಳು, ಪ್ರತಿ ವಿದ್ಯಾರ್ಥಿಯ ಮೇಲೆ ವಿಶೇಷ ಗಮನ, ರಾಷ್ಟ್ರೀಯ ಹಬ್ಬಗಳ ಆಚರಣೆ, ಸಂಗೀತ, ನೃತ್ಯ, ಕಲೆ, ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ವಿಶೇಷ ಆದ್ಯತೆ. ವಿಶಾಲವಾದ ಶಾಲಾ ಕೊಠಡಿಗಳು, ಆಧುನಿಕ ಉಪಕರಣಗಳ ಮೂಲಕ ಬೋಧನೆ, ವಾಹನದ ಸೌಲಭ್ಯ, ಪ್ರತಿ ಕೊಠಡಿಗೂ ಸಿಸಿ ಕ್ಯಾಮೆರಾ ಅಳವಡಿಕೆ, ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

**ಸಂಯೋಜಕರು, ಆಂಜನೇಯ ಬಡಾವಣೆ, 9 ನೇ ತಿರುವು ದಾವಣಗೆರೆ. ಮೊ: 98800 30171, 98804 36414**

**ಶ್ರೀ ಸಾಯಿ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,**

**ದಾವಣಗೆರೆ ಇದರ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರ ಹಾಗೂ ಪದಾಧಿಕಾರಿಗಳ ಚುನಾವಣೆ ವೇಳಾಪಟ್ಟಿ**

1) ನಾಮಪತ್ರ ಸ್ವೀಕರಿಸಲು ಕೊನೆಯ ದಿನಾಂಕ : 23.05.2022
2) ನಾಮಪತ್ರ ಪರಿಶೀಲನೆ ದಿನಾಂಕ : 24.05.2022
3) ನಾಮಪತ್ರ ವಾಪಸ್ ಪಡೆಯುವ ದಿನಾಂಕ : 25.05.2022
4) ಚುನಾವಣೆ/ಮತದಾನದ ದಿನಾಂಕ : 31.05.2022

ಸಹಿ/- ರಿಟರ್ನಿಂಗ್ ಅಧಿಕಾರಿ

ಶ್ರೀ ಸಾಯಿ ಕ್ರೆ.ಕೋ.ಆಪ್. ಸೊ.ಲಿ., ದಾವಣಗೆರೆ.

# ಮಲೇಬೆನ್ನೂರಿನಲ್ಲಿ ದಾದಿಯರಿಗೆ ಗೌರವ, ಸನ್ಮಾನ



ಮಲೇಬೆನ್ನೂರು, ಮೇ 13- ಮಾಜಿ ಶಾಸಕ ಬಿ.ಪಿ. ಹರೀಶ್ ಅವರ 62ನೇ ಹುಟ್ಟು ಹಬ್ಬದ ಅಂಗವಾಗಿ ಬಿಜೆಪಿ ಕಾರ್ಯಕರ್ತರು ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಹಾಲು, ಹಣ್ಣು, ಬ್ರೆಡ್ ವಿತರಿಸಿದರು. ಅಲ್ಲದೇ ಇದೇ ವೇಳೆ ಅಂತರ ರಾಷ್ಟ್ರೀಯ ದಾದಿಯರ ದಿನಾಚರಣೆ ಅಂಗವಾಗಿ ವೈದ್ಯರಿಗೆ, ದಾದಿಯರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ ಅವರ ನೇತೃತ್ವದ ಈ ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶ್, ಬಿ. ಮಂಜುನಾಥ್, ನಾಮಿನಿ ಸದಸ್ಯರಾದ ಪಿ. ಆರ್. ರಾಜು, ಎ.ಕೆ. ಲೋಕೇಶ್, ಪುರಸಭೆ ಮಾಜಿ ಸದಸ್ಯ ಬಿ. ಸುರೇಶ್, ಮುಖಂಡರಾದ ಮುದೇಗೌಡ್ರ ತಿಪ್ಪೇಶ್, ಓ.ಜಿ. ಕುಮಾರ್, ಭೋವಿ ಮಂಜಣ್ಣ, ಉಡೇದರ ಸಿದ್ದೇಶ್, ರೇಣುಕಾರಾಧ್ಯ, ಪಾಳೇಗಾರ್ ನಾಗರಾಜ್, ಜಿಗಳೇರ ಹಾಲೇಶಪ್ಪ, ಬಿ. ಚಂದ್ರಪ್ಪ, ಕೊಮಾರನಹಳ್ಳಿ ಸುನೀಲ್, ವೈದ್ಯಾಧಿಕಾರಿ ಡಾ. ಲಕ್ಷ್ಮಿ ದೇವಿ, ಡಾ. ನಿಸಾರ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಇದಕ್ಕೂ ಮುನ್ನ ಗ್ರಾಮದೇವತೆ ಶ್ರೀ ಏಕನಾಥೇಶ್ವರಿ, ಶ್ರೀ ಬಸವೇಶ್ವರ, ಶ್ರೀ ಬೀರಲಿಂಗೇಶ್ವರ, ಶ್ರೀ ಆಂಜನೇಯ ಸ್ವಾಮಿ ಸೇರಿದಂತೆ, ಮತ್ತಿತರ ದೇವಸ್ಥಾನಗಳಲ್ಲಿ ಹರೀಶ್ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

# ಉಪ ವಿಭಾಗಾಧಿಕಾರಿ ಮಮತಾ ವರ್ಗ: ಬೀಳ್ಕೊಡುಗೆ



ದಾವಣಗೆರೆ, ಮೇ 13- ನಗರದ ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್ ಅವರು ಧಾರವಾಡದ ವಿಶೇಷ ಭೂಸ್ವಾಧೀನ ಕಚೇರಿಗೆ ವರ್ಗಾವಣೆಗೊಂಡಿದ್ದು, ಅವರನ್ನು ಸರಳವಾಗಿ ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಮಮತಾ ಅವರು ಮಾತನಾಡಿ, ತಮಗೆ ಇಲ್ಲಿ ಎರಡು ವರ್ಷ 6 ತಿಂಗಳ ಕಾಲ ಕರ್ತವ್ಯ ನಿರ್ವಹಿಸಲು ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ತಿಳಿಸಿದರು. ದಾವಣಗೆರೆ ಒಂದು ಪುಣ್ಯಭೂಮಿ ಇದ್ದಂತೆ, ಇಲ್ಲಿ ನಾನು ತೃಪ್ತಿಯಿಂದ ಪ್ರಾಮಾಣಿಕವಾಗಿ ಸೇವೆ ಮಾಡಿದ್ದೇನೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ವೀರಪ್ಪ ಎಂ. ಬಾವಿ ಮಾತನಾಡಿ, ಅಧಿಕಾರಿಗಳು ಜನಸಾಮಾನ್ಯರಲ್ಲಿ ಬೆರೆತು ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸಿದರೆ ಇಂಥವರನ್ನು ಜನಸಾಮಾನ್ಯರು ಎಂದೂ ಮರೆಯುವುದಿಲ್ಲ ಎಂದರು.

ಈ ವೇಳೆ ಎಲ್ಲ ತಾಲ್ಲೂಕಿನ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸೇರಿ ಮಮತಾ ಹೊಸ ಗೌಡರ್ ಅವರನ್ನು ಸನ್ಮಾನಿಸಿ, ಬೀಳ್ಕೊಡುಗೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೊನ್ನಾಳಿ ಹುಲ್ಲುಮನಿ ತಿಮ್ಮಣ್ಣ ವಹಿಸಿದ್ದರು. ತಹಶೀಲ್ದಾರ್ ಬಸವನಗೌಡ ಕೊಟೂರು, ಹರಿಹರ ತಾ.ನ ರಾಮಚಂದ್ರಪ್ಪ, ಚನ್ನಗಿರಿ ತಾ.ನ ಪುಟ್ಟರಾಜು, ಜಗಳೂರು ತಾ.ನ ಸಂತೋಷ, ಹೊನ್ನಾಳಿ ತಾ.ನ ರಶ್ಮಿ, ವಾರ್ತಾ ಇಲಾಖೆಯ ಸರ್ವೋತ್ತಮ ಪ್ರಶಸ್ತಿ ಪುರಸ್ಕೃತ ಬಿ.ಎಸ್ ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಉತ್ತಮ ಸೇವೆ : ರವಿಗೆ ಡಿಸಿ ಅಭಿನಂದನೆ



ಮಲೇಬೆನ್ನೂರು, ಮೇ 13- ಇಲ್ಲಿನ ನಾಡಕಛೇರಿಯಲ್ಲಿರುವ ಅಟಲ್ ಜೀ ಜನಸ್ನೇಹಿ ಕೇದ್ರದಲ್ಲಿ ವಿವಿಧ ಪ್ರಮಾಣ ಪತ್ರಗಳ ಸೇವೆಯನ್ನು ನಿಗದಿತ ಅವಧಿಗಿಂತ ಮುಂಚೆಯೇ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಿದ ಕಾರಣಕ್ಕಾಗಿ ಉಪ ತಹಶೀಲ್ದಾರ್ ಆರ್. ರವಿ ಅವರಿಗೆ ಅಭಿನಂದನಾ ಪತ್ರ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯಲ್ಲಿ 3ನೇ ಸ್ಥಾನದಲ್ಲಿರುವ ಮಲೇಬೆನ್ನೂರು ನಾಡಕಛೇರಿಯ ಕಾರ್ಯಸಾಧನೆಗೆ ಶ್ರಮಿಸಿದ ಸಿಬ್ಬಂದಿ ವರ್ಗದವರನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅಭಿನಂದಿಸಿದ್ದಾರೆ.

## ಐದು ದಿನ ಮೊದಲೇ ಮುಂಗಾರು

**(1ನೇ ಪುಟದಿಂದ)** ಮತ್ತು ನಿಕೋಬಾರ್ ದ್ವೀಪಗಳನ್ನು ಪ್ರವೇಶಿಸಿ, ಮುಂದುವರಿಯಲು ಪೂರಕ ವಾತಾವರಣ ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದು ಇಲಾಖೆ ತಿಳಿಸಿದೆ.

ಕೇರಳಕ್ಕೆ ಮುಂಗಾರು ಮಾರುತಗಳು ತಲುಪುವುದನ್ನು ದೇಶದಲ್ಲಿ ಅಧಿಕೃತ ಮುಂಗಾರು ಆರಂಭ ಎಂದು ಪರಿಗಣಿಸಲಾಗುತ್ತದೆ.

ಚಂಡಮಾರುತ ಅಸನಿ ಪರಿಣಾಮದ ಕಾರಣದಿಂದಾಗಿ ಮುಂಗಾರು ಅವಧಿಗೆ ಮುಂಚೆ ಬರುತ್ತಿದೆ ಎಂದು ಇಲಾಖೆ ಹೇಳಿದೆ.

ಮುಂದಿನ ಐದು ದಿನಗಳಲ್ಲಿ ಕೇರಳ, ತಮಿಳುನಾಡು ಹಾಗೂ ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ವ್ಯಾಪಕ ಮಳೆಯಾಗಲಿದೆ ಎಂದೂ ತಿಳಿಸಲಾಗಿದೆ.

## ಚಂದ್ರನ ಮಣ್ಣಿನ ಮೇಲೆ ಸಸಿ

**(1ನೇ ಪುಟದಿಂದ)** ಚಿಮ್ಮು ಹಲಗೆಯಾಗಿ ಬಳಸಬಹುದಾಗಿದೆ. ಇದಕ್ಕಾಗಿ ಚಂದ್ರನ ಮೇಲೆ ನೆಲೆ ನಿರ್ಮಿಸುವುದು ಅಗತ್ಯವಾಗಲಿದೆ. ಈ ಪ್ರಯೋಗಕ್ಕಾಗಿ ಕೇವಲ 12 ಗ್ರಾಂಗಳ ಮಣ್ಣು ಬಳಸಲಾಗಿತ್ತು. ಚಂದ್ರನ ಮಣ್ಣಿಗೆ ನೀರು, ಪೌಷ್ಠಿಕಾಂಶ ಹಾಗೂ ಬೆಳಕು ನೀಡಿ ಅರೇಬಿಡೊಪ್ಸಿಸ್ ಸಸಿ ಬೆಳೆಯುವ ಪ್ರಯತ್ನ ನಡೆಸಲಾಗಿತ್ತು.

ಈ ಪ್ರಯೋಗ ನಮಗೆ ಅಚ್ಚರಿ ತಂದಿದೆ. ನಾವು ಇದನ್ನು ಊಹಿಸಿರಲಿಲ್ಲ. ಚಂದ್ರನ ಮಣ್ಣು ಹಾರ್ಮೋನುಗಳಿಗೆ ಅಡ್ಡಿಪಡಿಸುವುದಿಲ್ಲ ಎಂಬುದನ್ನು ಇದು ತೋರಿಸುತ್ತದೆ ಎಂದು ಅಧ್ಯಯನದಲ್ಲಿ ಭಾಗಿಯಾದ ಪ್ರೊ. ಅನ್ನಾ - ಲಿಸಾ ಪೌಲ್ ಹೇಳಿದ್ದಾರೆ.

# ಕನ್ನಡಕ್ಕಾಗಿ ವಿಧೇಯಕ, ಕನ್ನಡ ಕೇಳಲಿ ಗ್ರಾಹಕ

**(1ನೇ ಪುಟದಿಂದ)** ನಾಗಾಭರಣ ಹೇಳಿದರು.

ಗ್ರಾಹಕರು ಯಾವುದನ್ನು ಕೇಳುತ್ತಾರೋ, ಮಾರುಕಟ್ಟೆ ಅದನ್ನೇ ಪೂರೈಸುತ್ತದೆ. ಕನ್ನಡಿಗರು ತಾವು ವಹಿವಾಟು ನಡೆಸುವ ಎಲ್ಲ ಕಡೆ ಕನ್ನಡಕ್ಕೆ ಒತ್ತಾಯಿಸಬೇಕು. ಕನ್ನಡ ಬಳಸಬೇಕು, ಕನ್ನಡ ಕಾಣಿಸಬೇಕು ಹಾಗೂ ಕನ್ನಡ ಕೇಳಿಸಬೇಕು. ಆಗ ಭಾಷೆ ಬೆಳೆಯುತ್ತದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್, ತಮಿಳುನಾಡಿನಲ್ಲಿ ವೈದ್ಯರು ಔಷಧಿ ಚೀಟಿ ಕೊಡುವಾಗ ತಮಿಳನ್ನೇ ಬಳಸುತ್ತಾರೆ. ಈ ರೀತಿಯ ಭಾಷಾ ಅಭಿಮಾನ ಕನ್ನಡದ ಎಲ್ಲ ವೃತ್ತಿಪರರಿಗೆ ಬರಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನಗರ ಪಾಲಿಕೆ ಕನ್ನಡ ಜಾಗೃತಿ ಸಮಿತಿ ಸದಸ್ಯ ಬಾ.ಮ. ಬಸವರಾಜಯ್ಯ, ಕನ್ನಡ ಭಾಷೆ ಸಾಕಷ್ಟು ಬೆಳೆದಿದೆ. ಅದನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಿಭಾಯಿಸಬೇಕಿದೆ. ಬ್ಯಾಂಕ್, ರೈಲ್ವೆ, ನ್ಯಾಯಾಲಯ ಹಾಗೂ ಆಸ್ಪತ್ರೆ ಸೇರಿದಂತೆ, ಹಲವು ಕಚೇರಿಗಳಲ್ಲಿ ಕನ್ನಡ ಹೆಚ್ಚು ಬಳಕೆಗೆ ಜಾಗೃತಿ ಸಮಿತಿ ಜಿಲ್ಲೆಯಲ್ಲಿ ಶ್ರಮಿಸಿದೆ. ಶಾಲಾ - ಕಾಲೇಜುಗಳಲ್ಲಿ ಕನ್ನಡ ಕುರಿತು 15ಕ್ಕೂ ಹೆಚ್ಚು ಸ್ಪರ್ಧೆಗಳನ್ನು ಆಯೋಜಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯ್ತಿ ಸಿಇಒ ಡಾ. ಎ. ಚನ್ನಪ್ಪ, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಬಿ. ವಾಮದೇವಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಎನ್. ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಪಾಲಿಕೆಯ ಕನ್ನಡ ಜಾಗೃತಿ ಸಮಿತಿ ಸದಸ್ಯ ಬಿ. ದಿಳ್ಯಪ್ಪ ಸ್ವಾಗತಿಸಿದರೆ, ಸದಸ್ಯ ಎ. ಮಹಲಿಂಗಪ್ಪ ನಿರೂಪಿಸಿದರು

### ಕನ್ನಡ ಕಲಿಯುತ್ತಿರುವ ರಾಜ್ಯಪಾಲರು

ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರು ಕನ್ನಡ ಕಲಿಯುತ್ತಿದ್ದಾರೆ. ಅವರಿಗೆ ಕನ್ನಡ ಶಿಕ್ಷಕರೊಬ್ಬರು ಕನ್ನಡ ಕಲಿಸುತ್ತಿದ್ದಾರೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್ ತಿಳಿಸಿದ್ದಾರೆ.

ರಾಜ್ಯಪಾಲರು ಪ್ರತಿ ಭಾಷಣದ ಆರಂಭದಲ್ಲಿ ಕೆಲ ಕನ್ನಡ ಪದಗಳನ್ನು ಬಳಸುತ್ತಿದ್ದಾರೆ. ಅವರ ಕನ್ನಡ ಕಲಿಕೆಗಾಗಿ ಶಿಕ್ಷಕರೊಬ್ಬರನ್ನು ಕಳಿಸಲು ಪ್ರಾಧಿಕಾರ ಪ್ರಸ್ತಾಪಿಸಿತ್ತು. ಅದಕ್ಕೆ ರಾಜ್ಯಪಾಲರು ಸಮ್ಮತಿಸಿದ್ದರು ಎಂದವರು ಹೇಳಿದ್ದಾರೆ.

# ದೇವಸ್ಥಾನ ಪುನರ್ ನಿರ್ಮಾಣಕ್ಕೆ ಚಾಲನೆ, ಫಲಕ ಉದ್ಘಾಟನೆ



ದಾವಣಗೆರೆ, ಮೇ 13 - ಶ್ರೀ ವೀರಾಂಜನೇಯ ಮಹಾಸ್ವಾಮಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷರು ಮತ್ತು ಧರ್ಮದರ್ಶಿಗಳಾದ ಸುಕ್ಷೇತ್ರ ಬಿದ್ದ ಹನುಮಂತಪ್ಪನ ಮಟ್ಟಿ ಶ್ರೀ ಬಸವರಾಜ ಗುರೂಜಿ ಸಾನ್ನಿಧ್ಯದಲ್ಲಿ ಕಂಚಿಕೆರೆ ಹಾಗು ಸುತ್ತಮುತ್ತಲಿನ ಗ್ರಾಮಸ್ಥರ ಸಹಕಾರದಿಂದ ಸುಕ್ಷೇತ್ರದ ಕಟ್ಟಡ ಹಾಗೂ ದೇವಸ್ಥಾನದ ಪುನರ್ ನಿರ್ಮಾಣಕ್ಕೆ ಚಾಲನೆ ನೀಡಿದ ಫಲಕವನ್ನು ಬೆಂಡಿಗೆರೆ ರಸ್ತೆ ಕಂಚಿಕೆರೆ ಬನ್ನಿಮರದ ಬಾರಿಕರ ಸಿದ್ದಣ್ಣನವರ ಹೋಟೆಲ್ ಹತ್ತಿರ ಫಲಕ ಅಳವಡಿಸಲಾಯಿತು. ಈ ಸಂದರ್ಭದಲ್ಲಿ ಬಾರಿಕರ ಸಿದ್ದಣ್ಣ ದಂಪತಿಯನ್ನು ಸನ್ಮಾನಿಸಲಾಯಿತು.

ಪಿ. ಕೆಂಚನಗೌಡ್ರು, ಡಿ.ಕೆ. ಶಿವಕುಮಾರ್, ಎ.ಅಂಗಡಿ ಹಾಲೇಶ್, ಹೋಟೆಲ್ ಬಾರಿಕರ ಸಿದ್ದಣ್ಣ ದಂಪತಿ, ಯಲ್ಲಾಪುರದ ಮಲ್ಲಣ್ಣ, ಗೋಣಿ ಬಸವೇಶ್ವರ ಶಾಮಿಯಾನ ಬಸವರಾಜ್ ರವಿಯಣ್ಣ, ಬಾರಿಕರ ಮಂಜಣ್ಣ, ಹಾಲವರ್ತಿ ಹಾಲಪ್ಪ ನಿವೃತ್ತಿ ಶಿಕ್ಷಕರು, ದೇವೇಂದ್ರಪ್ಪ ತಿಮ್ಮಾಳ್, ಶಾಮ್ ಬಾರ್ ವಾಮದೇವ್, ಹರಿಹರ ಹಾಲಪ್ಪ, ಹೆಚ್. ಅಂಜಿನಪ್ಪ ದೆಮ್‌ಡೆರ್, ಸಂತೋಷ್‌ಕುಮಾರ್ ಬಿ. ಹೊಸಮನಿ ಪ್ರಕಾಶ್ ಶಾಮನೂರು, ಸಂಗಪ್ಪ ತೋಟದ ಶಾಮನೂರು, ಪವನ್ ಬಿ. ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹಿಜಾಬ್: ಶೈಕ್ಷಣಿಕ ಬಿಕ್ಕಟ್ಟಿಗೆ ಸರ್ಕಾರವೇ ನೇರ ಹೊಣೆ

ದಾವಣಗೆರೆ, ಮೇ 13- ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಉಚ್ಚ ನ್ಯಾಯಾಲಯವು ತನ್ನ ಅಂತಿಮ ತೀರ್ಪನ್ನು ಮುಂದೂಡಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕಾಲೇಜು ರಜೆಯ ಅವಧಿಯನ್ನೂ ಸಹ ಮುಂದೂಡಿದೆ. ಸರ್ಕಾರವು ಹಿಜಾಬ್ ಸುತ್ತುವರೆದ ವಿಚಾರವನ್ನು ಸರಿಯಾಗಿ ನಿರ್ವಹಣೆ ಮಾಡದೆ, ಈಗ ಕಾಲೇಜುಗಳ ಆರಂಭವನ್ನು ಮತ್ತಷ್ಟು ವಿಸ್ತರಣೆ ಮಾಡಿರುವುದು ರಾಜ್ಯದ ವಿದ್ಯಾರ್ಥಿಗಳಲ್ಲಿ ಅತೀವ ಆತಂಕವನ್ನು ಸೃಷ್ಟಿ ಮಾಡಿದೆ ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ ಆತಂಕ ವ್ಯಕ್ತಪಡಿಸಿದೆ.

ಕರ್ನಾಟಕ ಉಚ್ಚ ನ್ಯಾಯಾಲಯವು ಶಾಲಾ-ಕಾಲೇಜುಗಳನ್ನು ತೆರೆಯಲು ಆದೇಶ ನೀಡಿದ್ದರೂ ಸಹ, ರಾಜ್ಯ ಸರ್ಕಾರವು ಅದಕ್ಕೆ ವ್ಯತಿರಿಕ್ತವಾಗಿ ಕಾಲೇಜುಗಳನ್ನು ತೆರೆಯದೆ, ರಜೆಯ ಅವಧಿಯನ್ನು ವಿಸ್ತರಿಸಿದೆ. ಕೋವಿಡ್ ಸಾಂಕ್ರಾಮಿಕದ ಕಾರಣ ಪ್ರಸ್ತುತ ಶೈಕ್ಷಣಿಕ ವರ್ಷ ಬಹಳ ತಡವಾಗಿ ಆರಂಭವಾಗಿತ್ತು. ಆದ ಕಾರಣ, ಪಾಠಗಳು ಸಹ ಪೂರ್ಣಗೊಂಡಿಲ್ಲ.

ಆದರೆ, ಈಗಾಗಲೇ ಹಲವು ಕೋರ್ಸ್‌ಗಳ ಅಂತಿಮ ಪರೀಕ್ಷೆಗಳ ವೇಳಾಪಟ್ಟಿಯನ್ನೂ ಸಹ ಬಿಡುಗಡೆ ಮಾಡಲಾಗಿದೆ. ಇವೆಲ್ಲವೂ ವಿದ್ಯಾರ್ಥಿಗಳ ಮೇಲೆ ಅಪಾರವಾದ ಒತ್ತಡವನ್ನು ಹೇರಿವೆ. ಇಂತಹ ಸಂದರ್ಭದಲ್ಲಿ, ಕಾಲೇಜು ರಜೆಯ ಅವಧಿಯನ್ನು ವಿಸ್ತರಣೆ ಮಾಡುತ್ತಾ ಹೋದರೆ, ಇನ್ನಷ್ಟು ಶೈಕ್ಷಣಿಕ ಬಿಕ್ಕಟ್ಟು ನಿರ್ಮಾಣವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಈ ಹಿನ್ನೆಲೆಯಲ್ಲಿ ಏರ್ಪಡುವ ಎಲ್ಲ ಶೈಕ್ಷಣಿಕ ಸಮಸ್ಯೆಗಳಿಗೆ ಸರ್ಕಾರವೇ ಸಂಪೂರ್ಣ ಜವಾಬ್ದಾರಿ ತೆಗೆದುಕೊಳ್ಳಬೇಕು. ಕಾಲೇಜು ತೆರೆಯುವುದು ಮುಂದಕ್ಕೆ ಹೋದಂತೆಲ್ಲ, ಪರೀಕ್ಷೆಗಳನ್ನು ಮುಂದೂಡವ ಪರಿಸ್ಥಿತಿ ಬರುತ್ತದೆ. ಕಾಲೇಜು ಆರಂಭದ ಅವಧಿ ವಿಸ್ತರಣೆ ಹಿನ್ನೆಲೆಯಲ್ಲಿ ಏರ್ಪಡುವ ಎಲ್ಲ ಶೈಕ್ಷಣಿಕ ಸಮಸ್ಯೆಗಳಿಗೆ ಸರ್ಕಾರವೇ ಸಂಪೂರ್ಣ ಜವಾಬ್ದಾರಿ ವಹಿಸಿ, ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಎಐಡಿಎಸ್‌ಓ ಒತ್ತಾಯಿಸಿದೆ ಎಂದು ಸಮಿತಿಯ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ತಿಳಿಸಿದ್ದಾರೆ.

## ರೈಲುಗಳಲ್ಲಿ ಶುಚಿ, ರುಚಿ ತಿಂಡಿ : ಪ್ರಯಾಣಿಕರ ಹರ್ಷ

ದಾವಣಗೆರೆ, ಮೇ 13- ಇತ್ತೀಚಿನ ದಿನಗಳಲ್ಲಿ ರೈಲಿನಲ್ಲಿ ಉತ್ತಮ ಆಹಾರ ದೊರೆಯುತ್ತಿದೆ ಎಂದು ರೈಲ್ವೆ ಪ್ರಯಾಣಿಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಶುಚಿ, ರುಚಿ ಮತ್ತು ಕಡಿಮೆ ದರದಲ್ಲಿ ತಿಂಡಿಗಳು ದೊರೆಯುತ್ತಿದ್ದು, ಇದರಿಂದ ಮಧ್ಯಮ ವರ್ಗದ ಜನರಿಗೆ ತುಂಬಾ ಅನುಕೂಲವಾಗಲಿದೆ. ರೈಲ್ವೆ ಇಲಾಖೆಯಲ್ಲಿ ಇದೊಂದು ಆಶಾದಾಯಕ ಬೆಳವಣಿಗೆ ಎಂದು ನಗರದ ನಿತ್ಯ ಪ್ರಯಾಣಿಸುವ ಪ್ರಯಾಣಿಕರ ಸ್ನೇಹಿತರ ಬಳಗ ತಿಳಿಸಿದೆ.

## ದತ್ತಾಂಶ ಸಂಗ್ರಹ

ದಾವಣಗೆರೆ ಮೇ 13 - ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವ ಪೂರ್ಣ ಯೋಜನೆ ಕಲಾವಿದರ ದತ್ತಾಂಶ ಸಂಗ್ರಹ ಕುರಿತು ಜಿಲ್ಲಾ ವ್ಯಾಪ್ತಿಯ ಸಾಹಿತಿಗಳು ಅಥವಾ ಕಲಾವಿದರುಗಳು ಸೇವಾಸಿಂಧು ಪೋರ್ಟಲ್ sevasindhu.karnataka.gov.in/ ಗ್ರಾಮ ಒನ್ ಕೇಂದ್ರಗಳ ಮೂಲಕ ತಮ್ಮ ಮಾಹಿತಿ ನೋಂದಾಯಿಸಿಕೊಳ್ಳುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
27ನೇ ವರ್ಷದ
**ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ**
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಶ್ರೀಮತಿ ತುಳಸಮ್ಮ, ಶ್ರೀ ವಿ.ಎಸ್. ಅರುಣಾಚಲ ಶೆಟ್ರು ಮತ್ತು ಕುಟುಂಬ ವರ್ಗದವರ ಸೇವಾರ್ಥ.

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಸುಸಜ್ಜಿತವಾದ ವಾಣಿಜ್ಯ ಮಳಿಗೆ 1ನೇ ಮಹಡಿ ಬ್ಯಾಂಕ್ ಹಾಗೂ ಎಲ್ಲಾ ರೀತಿಯ ವ್ಯಾಪಾರಗಳಿಗೆ, ಶೋ ರೂಂಗೆ ಯೋಗ್ಯವಾದ 4503 ಅಡಿಗಳು ಹಾಗೂ 3250 ಅಡಿಗಳುಳ್ಳ ಸೆಲ್ಲರ್ ಬಾಡಿಗೆಗೆ ಇದೆ. ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.
84959 91223, 96205 95579

**3BHK ಮನೆ ಬಾಡಿಗೆಗೆ ಇದೆ**
ಗ್ರೌಂಡ್ ಫ್ಲೋರ್ ಉತ್ತರ ಫೇಸಿಂಗ್ ತರಳಬಾಳು ಬಡಾವಣೆ.
(ಸಸ್ಯಹಾರಿಗಳಿಗೆ ಮಾತ್ರ)
99023 83936, 82172 14069

**ಮಳಿಗೆ ಬಾಡಿಗೆಗೆ ಇವೆ**
ಎಸ್.ಎಸ್. ಲೇಔಟ್ 'ಬಿ' ಬ್ಲಾಕ್‌ನಲ್ಲಿ ಕಾರ್ನರ್ ಎರಡು ಮಳಿಗೆ ಬಾಡಿಗೆಗೆ ಇವೆ.
ವಿಚಾರಿಸಿರಿ :
94484 06702

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 30x40 North, 40x50 North, 40x60 East, 30x50 West, 60 ಅಡಿ ರೋಡ್‌ಗಿದೆ. 40x60 North, 40x60 South,
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
ಸಿದ್ಧವೀರಪ್ಪ ಬಡಾವಣೆ ದಕ್ಷಿಣ 30x40 ಡುಪ್ಲೆಕ್ಸ್, ಜೆ.ಹೆಚ್ ಪಟೇಲ್ ಬಡಾವಣೆ ಪೂರ್ವ 30x40 2BHK ಮೇಲೆ ಎರಡು ರೂಂ, 30x50 ಡುಪ್ಲೆಕ್ಸ್
ಐಗೂರು ವಿಜಯಕುಮಾರ್
99457 02495

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ವ್ಯವಸಾಯೇತರ ಜಮೀನು ಮಾರಾಟಕ್ಕಿದೆ**
1) ಪೂ, ಪ. 28.6 x113.8 ಉ.ದ (3 ಗುಂಟೆ)
2) ಪೂ, ಪ. 29.7x73.5 ಉ.ದ (2 ಗುಂಟೆ)
10.5 ಅಡಿ ಓಡಾಟಕ್ಕೆ ರಸ್ತೆ ಬಿಟ್ಟಿದೆ. ಸರ್ಕಾರಿ ಪ್ರೌಢಶಾಲೆ ಎದುರು, ನಂದಿಗುಡಿ ಮುಖ್ಯ ರಸ್ತೆ, ಭಾನುವಳ್ಳಿ, ಹರಿಹರ ತಾ. ಸಂಪರ್ಕಿಸಿ :
96119 55366

**ಡುಪ್ಲೆಕ್ಸ್ ಹೌಸ್ ಮಾರಾಟಕ್ಕೆ**
ಶಾಮನೂರಿನ ಯುರೋ ಕಿಡ್ಸ್ ಸ್ಕೂಲ್‌ನ ಹತ್ತಿರ 30x50ರಲ್ಲಿ ಸ್ವಂತಕ್ಕೆ ಕಟ್ಟಿಕೊಂಡಿರುವ ಡುಪ್ಲೆಕ್ಸ್ ಹೌಸ್ ಹೊಸಮನೆ ಮಾರಾಟಕ್ಕಿದೆ.
Contact :
73492 00928

**Sulthan Diamonds & Gold**
is hiring Sales Executives and Sales Trainees for Davanagere, Shivamogga, Bangalore, Mangalore, Surathkal & Udupi Showrooms. Min qualification +2. Both Male & Female candidates may apply. Food & Accomodation provided. Send in your CV to hr@sulthangold.com or
call 80500 62916

**Commercial / Resident Site ಮಾರಾಟಕ್ಕಿದೆ**
ಪಿ.ಬಿ ರೋಡ್‌ಗೆ ಲಗತ್ತಾಗಿರುವ ಉತ್ತರ ದಿಕ್ಕಿನ ಸೈಟ್ ಮಾರಾಟಕ್ಕಿದೆ. ಅಳತೆ : 47x70., 60 ಅಡಿ Bit of Land ಸಿಗುತ್ತವೆ. ಪಿ.ಬಿ. ರೋಡ್ ಆವರಗೆರೆ Hyundai Car ShowRoom ಪಕ್ಕದ ಸೈಟು ಸುತ್ತಲೂ ನಾಲ್ಕು ಕಡೆ ಕಾಂಪೌಂಡ್ ಹಾಕಿರುತ್ತದೆ. Contact :
91643 82998, 90082 27199

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಸೈಟುಗಳು ಮಾರಾಟಕ್ಕಿವೆ**
ಜೈನ್ ಕಾಲೇಜ್ ಹತ್ತಿರ (ಬಾಡ ಕ್ರಾಸ್) ಉತ್ತರ 40x88, ಮಾಡರ್ನ್ ಸ್ಕೂಲ್ ಹತ್ತಿರ, ಉತ್ತರ 40x60 ಅಕ್ಕ-ಪಕ್ಕ, 26x60 ಮತ್ತು 26x60, ಗ್ಲಾಸ್ ಹೌಸ್ ಹಿಂಭಾಗ, ಪಶ್ಚಿಮ 40x30, ಪೂರ್ವ 30x55, ಪಶ್ಚಿಮ 30x55, ಉತ್ತರ 30x40.
ಐಗೂರು ವಿಜಯಕುಮಾರ್
99457 02495

**ವಿನೋಬನಗರದಲ್ಲಿ ಮನೆ ಮಾರಾಟಕ್ಕಿದೆ**
ವಿನೋಬನಗರ 2ನೇ ಮೇನ್, (ಗಣೇಶ ಗುಡಿ ಹತ್ತಿರ) ಉತ್ತರ 15x42 ಮೇಲೆ ಕೆಳಗೆ (ಫುಲ್ ಫರ್ನಿಷಡ್) ವಿನಾಯಕ ಬಡಾವಣೆ (ವಿದ್ಯಾನಗರ) ಉತ್ತರ 40x60, ಬಸವೇಶ್ವರ ಲೇಔಟ್ ಪೂರ್ವ 30x40 ಕೆಳಗೆ 2BHK ಮೇಲೆ 2BHK ಮೇಲೆ ಒಂದು ರೂಂ
ಐಗೂರು ವಿಜಯಕುಮಾರ್
99457 02495

**ಮನೆ ಬಾಡಿಗೆಗೆ ಇದೆ**
ಕೆ.ಬಿ. ಬಡಾವಣೆ, ತ್ರಿಶೂಲ ಟಾಕೀಸ್ ರಸ್ತೆ, ಉತ್ತರ ದಿಕ್ಕಿನ, ವಾಸ್ತು ಪ್ರಕಾರ, 3BHK ಮನೆ, 2ನೇ ಫ್ಲೋರ್‌ನಲ್ಲಿ ಬಾಡಿಗೆಗೆ ಇದೆ. (ಆಫೀಸ್‌ಗೂ ಸಹ ಇದೆ)
94483 39231, 77951 49297

**WANTED**
KARATE INSTRUCTOR
Eligibility :
Brown belt /black Belt skills
Reguired : Training skills, Communications skills.
Eagle Fitness : Venky Sensei
76767 77672

**ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಗೆ ಸೇಲ್ಸ್‌ಮನ್ ಕೆಲಸಕ್ಕೆ ಹುಡುಗ/ ಹುಡುಗಿಯರು ಬೇಕಾಗಿದ್ದಾರೆ
91102 82125
99806 12203

**ಬೇಕಾಗಿದ್ದಾರೆ**
security Guards and Lady Security
ಸಂಪರ್ಕಿಸಿ :
S.T Somashekar
M : 98803 37686

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವ ಸೈಬರ್‌ನಲ್ಲಿ ಡಿಟಿಪಿ (ಟೈಪಿಂಗ್) ಮಾಡಲು ಯುವಕ ಮತ್ತು ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
80737 82814

**REQUIRED**
A Liberty Showroom Requires
Sales Executive
Qualification : PUC/Degree
Address - Liberty Showroom Opp. SS Mall, Shamanur Road, Davangere.
76761 54314

**BASIC+DTP+ FAST TYPING+ KANNADA**
Only 1000/-Rs
80734 65103

**ಜಾಗ ಬಾಡಿಗೆಗೆ ಇದೆ**
20x100 ಅಳತೆಯ 15 HP Power Supply ಇರುವ ಜಾಗ ಕೈಗಾರಿಕಾ ಉಪಯೋಗಕ್ಕೆ ಬಾಡಿಗೆಗೆ ಇದೆ. ಪಿ.ಬಿ. ರೋಡ್, ಹುಂಡೈ ಶೋರೂಂ ಪಕ್ಕ ಆವರಗೆರೆ, ಪೂನಾ-ಬೆಂಗಳೂರು ರೋಡ್.
72045 77823

**ಬೇಕಾಗಿದ್ದಾರೆ**
BA B.Ed, B.Sc B.Ed ಹಾಗೂ ಯಾವುದೇ ಡಿಗ್ರಿ ಪಡೆದವರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಶಾಲೆ
ಹೊಸ ಆರ್.ಟಿ.ಓ ಕಛೇರಿ ಹಿಂಭಾಗ, 6ನೇ ಕ್ರಾಸ್, ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ.
Mob : 99640 17729

**TEACHERS WANTED**
B.A. BSc., BEd., DEd., & NTC
Contact : Akshara EHPs T.C. Layout Davangere for more Details
Contact : 97311 00216, 98442 56380

**ಡ್ರೈವರ್‌ಗಳು ಬೇಕಾಗಿದ್ದಾರೆ**
ಪ್ರತಿಷ್ಠಿತ ಶಾಲೆಗೆ ಅನುಭವವುಳ್ಳ ಡ್ರೈವರ್‌ಗಳು ಬೇಕಾಗಿದ್ದಾರೆ.
Ph : 98444 33059

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ : 10,000/-
08192 261003
95352 43598, 99161 43003

**ಬೇಕಾಗಿದ್ದಾರೆ**
ಮೆಡ್ ಕ್ಯೂರ್ ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಅನುಭವವಿರುವ ಹುಡುಗರು ಬೇಕಾಗಿದ್ದಾರೆ. ವಯಸ್ಸು 18 ರಿಂದ 30, ಜಯನಗರ, SSI ಆಸ್ಪತ್ರೆ ರೋಡ್, ದಾವಣಗೆರೆ.
ಫೋ. : 78999 91860

**WORK FROM HOME**
Male/Female, Full / Part time Hand writing work. Small Letter to Capital Letter
Earn Per month 12,000/- to 15,000/-
89718 52431

**ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್ ನಲ್ಲಿ ಕೆಲಸ ಮಾಡಲು Marketing Executive ಬೇಕಾಗಿದ್ದಾರೆ. Site Visit, Engineer Meet etc 25-30 ವರ್ಷದೊಳಗಿನವರು ಸಂಪರ್ಕಿಸಿ:
74063 96332, 74067 40635

**SSLC/PUC/ITI/Degree ಪಾಸ್-ಫೇಲ್ ಮುಂದೇನು...**
ಡಿಪ್ಲೋಮಾ ಇನ್ ಪೇಷಂಟ್‌ಕೇರ್ ನರ್ಸಿಂಗ್-2 ವರ್ಷ, ಕೇವಲ 6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡುವ ಅವಕಾಶ. ಉಚಿತ ಯುನಿಫಾರ್ಮ್ & ಪುಸ್ತಕ ಸಂಪರ್ಕಿಸಿ : **ಗಂಗೋತ್ರಿ ಕಮ್ಯುನಿಟಿ ಕಾಲೇಜ್**, ಜಯದೇವ ಸರ್ಕಲ್ ಹತ್ತಿರ, ಲಾಯರ್ ರೋಡ್, ದಾವಣಗೆರೆ.
ಫೋ. : 86602 35013

**ಎಂಇಎಸ್ ಲೇಡೀಸ್ ಹಾಸ್ಟೆಲ್**
ಆಂಜನೇಯ ಬಡಾವಣೆ 9ನೇ ಕ್ರಾಸ್ ಇಂದ್ರಗಿರಿ ಚಂದ್ರಗಿರಿ ಅಪಾರ್ಟ್‌ಮೆಂಟ್ ಎದುರು, ದಾವಣಗೆರೆ.
ಸುಸಜ್ಜಿತವಾದ ಲೇಡಿಸ್ ಹಾಸ್ಟೆಲ್ 24 ಗಂಟೆಗಳು ನೀರಿನ ವ್ಯವಸ್ಥೆ, ಉತ್ತಮ ಆಹಾರ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಇದ್ದು ಇಲ್ಲಿ ಪಿಯುಸಿ ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಮಾತ್ರ ಹಾಸ್ಟೆಲ್ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗುವುದು
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
ಫೋ. : 98800 30171

**ಮನೆ ಬಾಡಿಗೆಗೆ ಇದೆ**
ಸರಸ್ವತಿ ನಗರ, 2 BHK ಗ್ರೌಂಡ್ ಫ್ಲೋರ್ (ಪೂರ್ವ), ಶಿವಕುಮಾರ ಬಡಾವಣೆ, 2 BHK ಮತ್ತು 3BHK ಉತ್ತರ
ಏಜೆಂಟ್
95385 65909

**LEWA**
Proffessional Makeup Artist Course & Beauty Courses Conducting here
Contact No :
81971 79414, 78924 68118

**WANTED FEMALE TEACHERS**
BA B.Ed.B.Sc. B.Ed. D.Ed & COMPUTER FACULTY
ATTRACTIVE SALARY WILL BE GIVEN TO EXPERIENCED & RIGHT CANDIDATES.
95356 10817

**ಜಾಗ ಮಾರಾಟಕ್ಕಿದೆ**
12 ಗುಂಟೆ ನಾಗನೂರು (ಶಿರಮಗೊಂಡನಹಳ್ಳಿಗೆ ಹೋಗುವ ಮುಖ್ಯ ರಸ್ತೆ)
ಸರ್ವೇ ನಂ. 1/9
90198 68627, 99022 61091

**ಭಟ್ಟರು ಬೇಕಾಗಿದ್ದಾರೆ**
ಕ್ಯಾಂಟೀನ್‌ನಲ್ಲಿ ಕೆಲಸ ಮಾಡಲು ಭಟ್ಟರು ಬೇಕಾಗಿದ್ದಾರೆ. ಅನುಭವವುಳ್ಳ ಭಟ್ಟರು ಬೇಕಾಗಿದ್ದಾರೆ.
99008 80857, 98864 58072

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ, ತೆಂಗು, ಮಾವು, ಸಪೋಟ, ಶ್ರೀಗಂಧ, ಬೆಟ್ಟದ ನೆಲ್ಲಿ, ಹೆಬ್ಬೇವು, ಮಹಾ ಘನಿ, ನಿಂಬೆ, ದಾಳಿಂಬೆ, ಗುಲಾಬಿ ಹಾಗೂ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ, ದೊರೆಯುತ್ತದೆ, ಸಂಪರ್ಕಿಸಿರಿ.
ಫೋ. : 94484 39639

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಐಸ್‌ಕ್ರೀಂ ಸಪ್ಲೈ ಮಾಡಲು ಹುಡುಗರು ಬೇಕಾಗಿದ್ದಾರೆ
99009 71888

**ಮನೆ ಮಾರಾಟಕ್ಕಿದೆ**
ವಿಳಾಸ : ಬನಶ್ರೀ ನಿಲಯ, # 3683/9, 7ನೇ ಅಡ್ಡರಸ್ತೆ, ಆಂಜನೇಯ ಬಡಾವಣೆ, (BIET ಕಾಲೇಜ್ ರಸ್ತೆಯಲ್ಲಿರುವ, ಬಾಪೂಜಿ ಬ್ಯಾಂಕ್ ಪಕ್ಕದಲ್ಲಿ)
ಫೋ. : 94484 54760
ದರ : 2 ಕೋಟಿಗಳು

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್ ಮತ್ತು ಸೆಕ್ಯೂರಿಟಿ ಬೇಕಾಗಿದ್ದಾರೆ. ಸಂಬಳ 9000. ಊಟ, ರೂಂ ಉಚಿತ ಸಂಪರ್ಕಿಸಿ :
97400 98047, 97400 98064

**New Commercial Building For Rent**
3 Floor Commercial Building at Chowkipete (Beside Gowdara Jayadevappa Cloth Shop) each floor 1000 sq.ft Total 3000 sq.ft. (3 floors)
98441 41049, 98440 64712

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 90080 67049

**NEET K-CET CRASH COURSE**
Class Timing 10am to 4-30pm | From 11-05-2022
SAMRUDDHI ACADEMY DAVANGERE
6364640296

**ಸೇಲ್ಸ್ ಬಾಯ್ಸ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ.
ಮಾರುತಿ ಟೆಕ್ಸ್‌ಟೈಲ್ಸ್ ಮಾರುತಿ ಗಾರ್ಮೆಂಟ್ಸ್
ವಿದ್ಯಾರ್ಥಿ ಭವನ, ಹದಡಿ ರಸ್ತೆ, ದಾವಣಗೆರೆ.
76764 19329
98448 60666
86608 55868

**REQUIRED**
Sales Executive, Sales Manager
for : FMG Praducts
Contact : 98441 20003
Shamanur Pharma & Health Care Pvt Ltd.,
374, 4th main, PJ extn., Davangere.

**MK CAR BAZAR**
Buying and Selling of any Cars.
Need Male workers for work.
SS Layout, Ring Road, Davanagere.
Salary : 10,000/-
M : 97427 19613

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಕೆಲಸಕ್ಕೆ ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ (ಅನುಭವವುಳ್ಳವರು ಹಾಗೂ ಸ್ಥಳೀಯರಿಗೆ ಮೊದಲ ಆದ್ಯತೆ)
ಫೋ. : 77602 68105

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಶ್ರೀ ಮಂಜುನಾಥ ಜ್ಯೋತಿಷ್ಯಕೇಂದ್ರ**
ಧರ್ಮಸ್ಥಳದಿಂದ ನೇರ ಪರಿಹಾರ ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ಸಮಸ್ಯೆ, ದಾಂಪತ್ಯ ಸಮಸ್ಯೆ, ಫೋನ್ ಮೂಲಕ ಪರಿಹಾರ. ಶ್ರೀ ಮಂಜುನಾಥ ಭಟ್ಟ.
M : 97315 83591

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಫ್ಯಾಕ್ಟರಿಗೆ ಕೆಲಸ ಮಾಡಲು ಹೆಲ್ಪರ್ ಹುಡುಗರು ಬೇಕಾಗಿದ್ದಾರೆ. 8 ತಾಸು ಡ್ಯೂಟಿ. ESI & PF ಸೌಲಭ್ಯವಿದೆ.
96113 94063, 88678 53961

## 'ಕಪ್ಪು ನೆಲದ ಕೆಂಪು ಗಾದೆ' ಪುಸ್ತಕ ನಾಳೆ ಬಿಡುಗಡೆ



ದಾವಣಗೆರೆ, ಮೇ 13- ಹುಸೇನ್ ಬ್ರದರ್ಸ್ ಮತ್ತು ಸಹನಾ ಪ್ರಕಾಶನದ ವತಿಯಿಂದ ಇಮ್ತಿಯಾಜ್ ಹುಸೇನ್ ಇವರ 'ಕಪ್ಪು ನೆಲದ ಕೆಂಪು ಗಾದೆ' ಪುಸ್ತಕ ಬಿಡುಗಡೆ ಸಮಾರಂಭವನ್ನು ನಾಡಿದ್ದು ದಿನಾಂಕ 15ರ ಭಾನುವಾರ ಬೆಳಿಗ್ಗೆ 11.30ಕ್ಕೆ ನಗರದ ರೋಟರಿ ಬಾಲಭವನದ ನೂತನ ಕಟ್ಟಡದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಧಾನಸಭೆ ಮಾಜಿ ಸಭಾಧ್ಯಕ್ಷ ಕೆ.ಆರ್. ರಮೇಶ್‌ಕುಮಾರ್ ಪುಸ್ತಕ ಲೋಕಾರ್ಪಣೆಗೊಳಿಸುವರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್ ಅಧ್ಯಕ್ಷತೆ ವಹಿಸುವರು. ಪುಸ್ತಕ ಕುರಿತು ಚಿಂತಕ ಬಿ. ಪೀರ್‌ಬಾಷಾ ಮಾತನಾಡುವರು ಎಂದು ಕೃತಿಕಾರ ಇಮ್ತಿಯಾಜ್ ಹುಸೇನ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಎಐಟಿಯುಸಿ ರಾಜ್ಯಾಧ್ಯಕ್ಷ ಹೆಚ್.ವಿ. ಅನಂತ ಸುಬ್ಬರಾವ್, ಡಾ. ಸಿದ್ಧನಗೌಡ ಪಾಟೀಲ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಕೌಸರ್ ರೇಷ್ಮಾ, ಹಿರಿಯ ಪತ್ರಕರ್ತ ಬಿ. ಎನ್. ಮಲ್ಲೇಶ್, ಚಿಂತಕ ಪ್ರೊ. ಸಿ.ಕೆ. ಮಹೇಶ್, ಹಿರಿಯ ಪತ್ರಕರ್ತ ದೊಣ್ಣೆಹಳ್ಳಿ ಗುರುಮೂರ್ತಿ ಪಾಲ್ಗೊಳ್ಳುವರು. ಇದೇ ಸಂದರ್ಭದಲ್ಲಿ ಬಾಪೂಜಿ ವಿದ್ಯಾ ಸಂಸ್ಥೆಯ ನಿಕಟ ಪೂರ್ವ ನಿರ್ದೇಶಕ ಕೆ. ಇಮಾಂ ಅವರನ್ನು ಸನ್ಮಾನಿಸಲಾಗುವುದು.

ಬಿ.ಎನ್. ಮಲ್ಲೇಶ್, ದಾದಾಪೀರ್ ನವಿಲೇಹಾಳ್, ಜೆ. ಕಲೀಂ ಭಾಷಾ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಬನ್ನಿಕೋಡು ಗ್ರಾ.ಪಂ.ಗೆ ಉಪಾಧ್ಯಕ್ಷರಾಗಿ ಪೂಜಾ



ಮಲೇಬೆನ್ನೂರು, ಮೇ 13- ಬನ್ನಿಕೋಡು ಗ್ರಾಮ ಪಂಚಾಯ್ತಿ ನೂತನ ಉಪಾಧ್ಯಕ್ಷರಾಗಿ ಶ್ರೀಮತಿ ಪೂಜಾ ಕುರಿಯರ್ ಮಾದೇಶ್ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಿಡಬ್ಲ್ಯೂಡಿ ಎಇಇ ಶಿವಮೂರ್ತಿ ಅವರು ಚುನಾವಣಾಧಿಕಾರಿಯಾಗಿದ್ದರು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೇಣುಕಮ್ಮ ಹನುಮಂತಪ್ಪ ಅವರು ಪೂಜಾ ಅವರನ್ನು ಅಭಿನಂದಿಸಿದ್ದಾರೆ.

## ಅಕ್ಕಮಹಾದೇವಿಯ ಆತ್ಮಸ್ಥೈರ್ಯ ಮಹಿಳೆಯರಲ್ಲೂ ಬರಬೇಕು



### ತಾಲ್ಲೂಕು ಕಸಾಪ ದತ್ತಿ ಉಪನ್ಯಾಸದಲ್ಲಿ ಶೋಭಾ ಮಂಜುನಾಥ್ ಸದಾಶಯ

ದಾವಣಗೆರೆ, ಮೇ 13- ಅಕ್ಕಮಹಾದೇವಿಯ ಆತ್ಮಸ್ಥೈರ್ಯ ಮೆಚ್ಚುವಂತಹದ್ದು. ಈ ರೀತಿಯ ಆತ್ಮಸ್ಥೈರ್ಯ ಎಲ್ಲಾ ಮಹಿಳೆಯರಲ್ಲೂ ಬರಬೇಕು ಎಂದು ಕವಯತ್ರಿ, ಕಲಾವಿದೆ ಶೋಭಾ ಮಂಜುನಾಥ್ ಸದಾಶಯ ವ್ಯಕ್ತಪಡಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಎಲಿಸವ್ವ ಜಾನಪದ ಮಹಿಳಾ ಸಂಘ ಮತ್ತು ಜೈ ಹನುಮಾನ್ ಸಾಂಸ್ಕೃತಿಕ ಯುವಕ ಸಂಘ (ಬೆಳ್ಳೂಡಿ) ಇವುಗಳ ಸಹಯೋಗದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ನಗರದ ಗಂಗಾಮತಸ್ಥ ವಿದ್ಯಾರ್ಥಿ ನಿಲಯದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಅಕ್ಕಮಹಾದೇವಿ ಎಂದರೆ ಸ್ಫೂರ್ತಿ, ಆತ್ಮಸ್ಥೈರ್ಯ ತುಂಬುವ ಧೀಮಂತ ಮಹಿಳೆ. ಮಹಿಳೆಯರಿಗೆ ಅಚ್ಚುಮೆಚ್ಚಿನ ವಚನಗಾರ್ತಿ ಎಂದು ಶೋಭಾ ಬಣ್ಣಿಸಿದರು.

ಕನ್ನಡ ಉಳಿಸಲು ದೊಡ್ಡ ಪಂಡಿತರು, ಘನ ವಿದ್ಯೆಯಲ್ಲಿ ತೊಡಗಬೇಕೆಂದೇನಿಲ್ಲ. ಆಡು ಭಾಷೆ ಕನ್ನಡವನ್ನು ಅಚ್ಚುಕಟ್ಟಾಗಿ ಬಳಸಿದರೆ ಸಾಕು ಉಳಿದು, ಬೆಳೆಯುತ್ತದೆ. ನಮ್ಮ ಮನೆಗಳಲ್ಲಿ, ಸಾರ್ವಜನಿಕವಾಗಿ ಕನ್ನಡವನ್ನು ಎಷ್ಟು ಸಾಧ್ಯವೋ ಅಷ್ಟು ಸ್ಪಷ್ಟವಾಗಿ ಬಳಸಿದರೆ, ಕನ್ನಡ ಭಾಷೆ ಉಳಿವು ಸಾಧ್ಯ ಎಂದು ಅಭಿಪ್ರಾಯ ಪಟ್ಟರು.

ಕನ್ನಡವನ್ನು ಉಳಿಸಿ, ಬೆಳೆಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪರಿಶ್ರಮ ಅಪಾರವಾಗಿದ್ದು, ಅಂತೆಯೇ ಮುಂದುವರೆದು ಸಾಗಿದೆ. ಪರಿಷತ್ತಿನ ಕನ್ನಡ ಉಳಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರಲ್ಲದೇ, ಅಕ್ಕನ ವಚನಗಳಲ್ಲಿ ಮಹಿಳಾ ಅಸ್ಮಿತೆ ವಿಷಯ ಕುರಿತು ಉಪನ್ಯಾಸ ನೀಡುತ್ತಾ, ಅಕ್ಕಮಹಾದೇವಿ ಜೀವಿತಾವಧಿ 20 ವರ್ಷವಾದರೂ 200 ವರ್ಷಗಳ ಸಾಧನೆ ಮಾಡಿ ತೋರಿದ ಇಡೀ ಸ್ತ್ರೀ ಕುಲದ ರತ್ನ. ಅಕ್ಕಮಹಾದೇವಿ ತನ್ನ ಜೀವನದಲ್ಲಿ ಎಂತಹದ್ದೇ ಕಷ್ಟ, ಸಂಕಷ್ಟಗಳು ಎದುರಾದರೂ ಸಹಿಸಿಕೊಂಡು ವಿಚಲಿತಳಾಗದೇ ತನ್ನ ಗುರಿಯನ್ನು ಸಾಧಿಸಿದರು. ಅಂತೆಯೇ ಎಲ್ಲಾ ಹೆಣ್ಣು ಮಕ್ಕಳು ಸಹ ತಮ್ಮ ಬದುಕಿನಲ್ಲಿ ಯಾವುದೇ ಕಷ್ಟಗಳು ಬಂದರೂ ಧೈರ್ಯವಾಗಿ ಮೆಟ್ಟಿ ನಿಂತು ಜೀವನದಲ್ಲಿ ಸಾಧನೆ ಮಾಡಬೇಕೆಂಬುದಕ್ಕೆ ಪ್ರೇರಣೆಯಾಗಿದ್ದಾರೆ ಎಂದು ಹೇಳಿದರು.

ಇದೇ ವೇಳೆ ನಗರ ಪಾಲಿಕೆ ಮಹಿಳಾ ಸ್ವಚ್ಛಗಾರರಾದ ವನಜಾಕ್ಷಮ್ಮ ಮತ್ತು ಮತ್ತೂರಮ್ಮ ಇವರನ್ನು ಸನ್ಮಾನಿಸಿ, ಗೌರವಿಸುವ ಮೂಲಕ ನಗರ ಸ್ವಚ್ಛತಾ ಸೇವೆಗೆ ಅಭಿನಂದಿಸಲಾಯಿತು.

ಬೆಳ್ಳೂಡಿಯ ಡೊಳ್ಳು ಕಲಾವಿದ ರೇವಣಸಿದ್ದಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಎಲಿಸವ್ವ ಜಾನಪದ ಮಹಿಳಾ ಸಂಘದ ದಾವಣಗೆರೆ ಅಧ್ಯಕ್ಷರಾದ ಮೀನಾಕ್ಷಿ ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಡಾ. ಎ.ಹೆಚ್. ಶಿವಯೋಗಿ ಸ್ವಾಮಿ ಅವರ ಪುತ್ರ ಡಾ. ಶಿವಬಸವ ಸ್ವಾಮಿ, ತಾಲ್ಲೂಕು ಕಸಾಪ ನಿರ್ದೇಶಕರಾದ ಷಡಕ್ಷರಪ್ಪ ಎಲೆಬೇತೂರು, ಸೌಭಾಗ್ಯ, ಪರಿಮಳ ಸೇರಿದಂತೆ ಇತರರು ಇದ್ದರು.

ತಾಲ್ಲೂಕು ಕಸಾಪ ಗೌರವ ಕಾರ್ಯದರ್ಶಿ ದಾಗಿನಕಟ್ಟೆ ಪರಮೇಶ್ವರಪ್ಪ ನಿರೂಪಿಸಿದರು. ನಿರ್ದೇಶಕ ಆರ್. ಶಿವಕುಮಾರ್ ಸ್ವಾಗತಿಸಿದರು. ನಾಗವೇಣಿ ವಂದಿಸಿದರು.

## ಸ್ವಾತಂತ್ರ್ಯ ಬಂದು 8 ದಶಕಗಳಾದರೂ ವಿನಾಶವಾಗದ ಜಾತಿ ವ್ಯವಸ್ಥೆ



ದಾವಣಗೆರೆ, ಮೇ 13 - ಸ್ವಾತಂತ್ರ್ಯ ಬಂದು 8 ದಶಕಗಳಾದರೂ ಸಹ ಇಂದಿಗೂ ಸಹ ಜಾತಿ ವ್ಯವಸ್ಥೆ ನಿರಂತರವಾಗಿದೆ. ಒಂದು ಕಡೆ ಜಾತಿ ವ್ಯವಸ್ಥೆ ಉಳಿಸಿ ಕೊಂಡು ಹೋಗುವ ಹುನ್ನಾರ ನಡೆಯುತ್ತಿದ್ದರೆ, ಮತ್ತೊಂದು ಕಡೆ ಜಾತಿ - ಜಾತಿ ನಡುವೆ ಸಮಾನತೆ ತರುವ, ಜಾತಿ ವ್ಯವಸ್ಥೆಯನ್ನು ವಿನಾಶ ಮಾಡುವ ಹೋರಾಟ ನಡೆಯುತ್ತಿದೆ. ಆದರೂ ಜಾತಿ ಪದ್ಧತಿ ನಿವಾರಣೆ ಆಗಿಲ್ಲ ಎಂದು ಹಿರಿಯ ನ್ಯಾಯವಾದಿ ಎಲ್.ಹೆಚ್.ಅರುಣ್‌ಕುಮಾರ್ ವ್ಯಾಕುಲತೆ ವ್ಯಕ್ತಪಡಿಸಿದರು.

ಸ್ಲಂ ಜನಾಂದೋಲನ ಕರ್ನಾಟಕ ಹಾಗೂ ಸಾವಿತ್ರಿಬಾಯಿ ಫುಲೆ ಮಹಿಳಾ ಸಂಘಟನೆ ಜಿಲ್ಲಾ ಸಮಿತಿ ವತಿಯಿಂದ ನಗರದ ರೋಟರಿ ಬಾಲಭವನದಲ್ಲಿ ಇಂದು ಏರ್ಪಾಡಾಗಿದ್ದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆ ತಿದ್ದುಪಡಿ 2015ರ ಮಾಹಿತಿ ಕಾರ್ಯಾಗಾರದ ಉದ್ಘಾಟನೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನೆರವೇರಿಸಿ ಅವರು ಮಾತನಾಡಿದರು.

ಎಲ್ಲಿಯವರೆಗೆ ಜಾತಿ-ಜಾತಿಗಳ ನಡುವೆ ಸಮಾನತೆ ಆಗುವುದಿಲ್ಲವೋ, ಜಾತಿ ಪದ್ಧತಿ ನಿವಾರಣೆ ಆಗುವುದಿಲ್ಲವೋ ಅಲ್ಲಿಯವರೆಗೂ ಸಹ ದುರ್ಬಲರ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿರುತ್ತವೆ. ಆದ್ದರಿಂದ ಇಂದಿನ 21ನೇ ಶತಮಾನದಲ್ಲಿ ಜಾತಿ ಸಮಾನತೆ ಬಂದಿದೆ. ಅಂತರ ಕಡಿಮೆ ಆಗಿದೆ ಎಂದು ಹೇಳುತ್ತಾರೆ.

ಆದರೆ, ಅಂತರ್ಜಾತಿ ಮದುವೆಯಾದವರಿಗೆ ಈಗಲೂ ಸಹ ಭೋಜನ ನಡೆಯುತ್ತಿಲ್ಲ. ಬೇರೆ ಜಾತಿಯವರನ್ನು ತಮ್ಮ ಮನೆಗಳಲ್ಲಿ ಬಿಟ್ಟುಕೊಳ್ಳುವುದಿಲ್ಲ ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆ ನಮ್ಮ ದೇಶದಲ್ಲಿ ಅತ್ಯಂತ ಹೆಚ್ಚು ಚರ್ಚಿತವಾದ ಕಾಯಿದೆ.

ದೌರ್ಜನ್ಯಗಳು ಹೆಚ್ಚು ನಡೆಯುತ್ತಿದ್ದರೂ ಸಹ ಕಾಯಿದೆಯ ದುರುಪಯೋಗ ಆಗುತ್ತಿದೆ ಎಂದು ವಾದಿಸುವ ಒಂದು ವರ್ಗ ನಿರಂತರವಾಗಿ ಪ್ರಹಾರ ಮಾಡುತ್ತಲೇ ಬಂದಿದೆ ಎಂದು ಹೇಳಿದರು.

ರಾಜ್ಯ ಸಂಚಾಲಕ ಎ.ನರಸಿಂಹ ಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿ, ಭಾರತ ದೇಶ ಜಾತಿ ವ್ಯವಸ್ಥೆಯಿಂದ ಕೂಡಿರುವ ಸಾಮಾಜಿಕ ವ್ಯವಸ್ಥೆ ಹೊಂದಿರುವ ದೇಶ. ಭಾರತದಲ್ಲಿ ಜಾತಿ ವ್ಯವಸ್ಥೆ ಇಲ್ಲದೇ ಸಮಾಜವನ್ನು ಕಲ್ಪಿಸಲು ಸಾಧ್ಯವಿಲ್ಲ. ಜಾತಿಯ ಸ್ವರೂಪ ಸಮಾಜದಲ್ಲಿ ಕಣ್ಣಿಗೆ ಕಟ್ಟಿದಂತೆ ಬಹಿರಂಗವಾಗಿ, ಪ್ರತ್ಯಕ್ಷವಾಗಿ ಕಾಣುತ್ತದೆ. ಆದರೆ, ನಗರದಲ್ಲಿ ಕಣ್ಣಿಗೆ ಕಾಣದಿದ್ದರೂ ಜಾತೀಯತೆ ಇದೆ. ಜಾತೀಯತೆಯ ಪ್ರತ್ಯಕ್ಷ ಸಾಕ್ಷಿ ಕೊಳಚೆ ಪ್ರದೇಶಗಳು. ಇಲ್ಲಿ ಯಾವುದೇ ಮೂಲಭೂತ ಸೌಲಭ್ಯಗಳು ಇರುವುದಿಲ್ಲ ಎಂದರು.

### ಜಾತಿಗೊಂದು ಸ್ಮಶಾನ

ಜಾತಿ ವಿನಾಶದ ವ್ಯವಸ್ಥೆ ಕೇವಲ ಭಾಷಣಕ್ಕೆ ಸೀಮಿತವಾಗಿದೆ. ಇನ್ನು ಸತ್ತವರನ್ನೂ ಸಹ ಸಂಸ್ಕಾರ ಮಾಡಲು ಒಂದೇ ಸ್ಮಶಾನ ಇಲ್ಲ. ಬೇರೆ ಬೇರೆ ಜಾತಿಗೆ ಬೇರೆ ಬೇರೆ ಸ್ಮಶಾನಗಳಿವೆ. ಇದು ಗ್ರಾಮಾಂತರ ಪ್ರದೇಶಗಳಿಗೆ ಮಾತ್ರವಲ್ಲ ನಗರ ಪ್ರದೇಶಗಳು ಇದರಿಂದ ಹೊರತಾಗಿಲ್ಲ. ಇಂತಹ ವ್ಯವಸ್ಥೆಯಲ್ಲಿ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಎಲ್ಲಿಯವರೆಗೆ ಜಾತಿ ವಿನಾಶ ಆಗುವುದಿಲ್ಲವೋ ಅಲ್ಲಿಯವರೆಗೆ ಇಂತಹ ಕಾನೂನುಗಳ ಅವಶ್ಯಕತೆ ಇದೆ.

- ಎಲ್. ಹೆಚ್. ಅರುಣ್ ಕುಮಾರ್, ಹಿರಿಯ ನ್ಯಾಯವಾದಿ

ಸಂಘಟನೆಯ ಜಿಲ್ಲಾ ಗೌರವಾಧ್ಯಕ್ಷ ಎಂ.ಶಬ್ಬೀರ್ ಸಾಬ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ವಕೀಲ ಶಿವಮಣಿ ಧನ್, ನರಸಿಂಹಪ್ಪ, ರೇಣುಕಾ ಯಲ್ಲಮ್ಮ, ಸುಹೀಲ್ ಭಾಷಾ, ಬಾಲಪ್ಪ, ಸಾವಿತ್ರಮ್ಮ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ನಾಳೆ ಮಜ್ಜಿಗೆ ವಿತರಣೆ ಸಮಾರೋಪ

ದಾವಣಗೆರೆ, ಮೇ 13- ವಿಕಾಸ ತರಂಗಿಣಿ ವತಿಯಿಂದ ನಗರದಲ್ಲಿ ನಡೆಯುತ್ತಿರುವ 27ನೇ ವರ್ಷದ ಉಚಿತ ಮಜ್ಜಿಗೆ ಸಮಾರೋಪ ಸಮಾರಂಭ, ಪ್ರಸಾದ ಮತ್ತು ಮಜ್ಜಿಗೆ ವಿತರಣೆ ಕಾರ್ಯಕ್ರಮವು ನಾಡಿದ್ದು ದಿನಾಂಕ 15 ರ ಭಾನುವಾರ ನಗರ ಪಾಲಿಕೆ ಮುಂಭಾಗ ಜರುಗಲಿದೆ.

ಶ್ರೀ ರಾಮಕೃಷ್ಣಾಶ್ರಮದ ಸ್ವಾಮೀಜಿ ಈ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಪಾಲಿಕೆ ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ವಿಕಾಸ ತರಂಗಿಣಿ ಸಂಚಾಲಕ ಸತ್ಯನಾರಾಯಣ ಮೂರ್ತಿ ರೆಡ್ಡಿ ತಿಳಿಸಿದ್ದಾರೆ.

## ನಿಟುವಳ್ಳಿಯಲ್ಲಿ ಅಂಬೇಡ್ಕರ್ ಜಯಂತಿ

ಸಾಮರಸ್ಯ ವೇದಿಕೆ ವತಿಯಿಂದ ಡಾ. ಬಿ.ಆರ್ ಅಂಬೇಡ್ಕರ್ ಜಯಂತ್ಯೋತ್ಸವ ಕಾರ್ಯಕ್ರಮವು ಇಂದು ಸಂಜೆ 5 ಗಂಟೆಗೆ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ನಡೆಯಲಿದೆ.

ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

'ಡಾ. ಅಂಬೇಡ್ಕರ್ ಮತ್ತು ಸಾಮರಸ್ಯ' ಕುರಿತು ಸಾಮಾಜಿಕ ಕಾರ್ಯಕರ್ತ ವಾದಿರಾಜ ಉಪನ್ಯಾಸ ನೀಡಲಿದ್ದಾರೆಂದು ಸಾಮರಸ್ಯ ವೇದಿಕೆ ಜಿಲ್ಲಾ ಸಂಯೋಜಕ ಗಿರೀಶ್, ನಗರ ಸಂಯೋಜಕ ಬಸವರಾಜ್ ಉಚ್ಚಂಗಿದುರ್ಗ ತಿಳಿಸಿದ್ದಾರೆ.

## ಪಂಚಮಸಾಲಿ : ಮಹಿಳಾ ಘಟಕದ ಸಭೆ ಮುಂದಕ್ಕೆ

ದಾವಣಗೆರೆ, ಮೇ 13- ನಾಳೆ ದಿನಾಂಕ 14ರಂದು ನಡೆಯಬೇಕಿದ್ದ ಪಂಚಮಸಾಲಿ ಸಮಾಜದ ಮಹಿಳಾ ಘಟಕಗಳ ಪುನರ್ ರಚನೆ ಸಭೆಯನ್ನು ದಿನಾಂಕ 17ರ ಮಂಗಳವಾರ ಸಂಜೆ 5 ಗಂಟೆಗೆ ಮುಂದೂಡಲಾಗಿದೆ ಎಂದು ಜಿಲ್ಲಾ ಪಂಚಮಸಾಲಿ ಸಮಾಜದ ಪ್ರಧಾನ ಕಾರ್ಯದರ್ಶಿ ಎಸ್. ಸಿ. ಕಾಶೀನಾಥ್ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆ



ದಾವಣಗೆರೆ, ಮೇ 13- ನಾಡಿದ್ದು ದಿನಾಂಕ 15ರ ಭಾನುವಾರ ನಗರದ ಶಾಮನೂರು ಶಿವಶಂಕರಪ್ಪ ಜಿಲ್ಲಾ ಕಾಂಗ್ರೆಸ್ ಸಮುದಾಯ ಭವನದಲ್ಲಿ ಹದಿನಾರು ವರ್ಷದೊಳಗಿನ ಮಕ್ಕಳಿಗೆ ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆ ಏರ್ಪಡಿಸಲಾಗಿದೆ.

ಈ ಸ್ಪರ್ಧೆಯು ಸ್ವಿಸ್ ಲೀಗ್ ಮಾದರಿಯಲ್ಲಿ ನಡೆಯಲಿದ್ದು, ಲೀಗ್‌ನಲ್ಲಿ 7 ಸುತ್ತುಗಳು ನಡೆಯಲಿವೆ. ಭಾಗವಹಿಸಿದ ಎಲ್ಲಾ ಸ್ಪರ್ಧಾಳುಗಳು 7 ಸುತ್ತುಗಳಲ್ಲಿ ಆಡಲಿದ್ದಾರೆ. ಪಂದ್ಯಾವಳಿಯು ಅಂದು ಸಂಜೆ 5 ಗಂಟೆಗೆ ಮುಕ್ತಾಯಗೊಳ್ಳಲಿದ್ದು, ಬಹುಮಾನ ವಿತರಣೆ ಸಮಾರಂಭದಲ್ಲಿ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ಸಂಘದ ಜಂಟಿ ಕಾರ್ಯದರ್ಶಿ ಮಂಜು ಸ್ವರಾಜ್ ತಿಳಿಸಿದರು.

ವಿವರಕ್ಕೆ ಸಂಘದ ಕಾರ್ಯದರ್ಶಿ ಯುವರಾಜ್ (9945613469) ಮಂಜುಳಾ ಯುವರಾಜ್ (7259310197) ಅವರನ್ನು ಸಂಪರ್ಕಿಸಬಹುದು.

## ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಪ್ರವೇಶ ಪರೀಕ್ಷೆ

ದಾವಣಗೆರೆ, ಮೇ 13- ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ 6ನೇ ತರಗತಿ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಶಾಲೆಗಳಲ್ಲಿ ಅಲ್ಪಸಂಖ್ಯಾತ ವರ್ಗದ ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ನಾಡಿದ್ದು ದಿನಾಂಕ 15ರ ಭಾನುವಾರ ನಗರದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಶಾಲೆಯಲ್ಲಿ ಪರೀಕ್ಷೆಯನ್ನು ಹಮ್ಮಿಕೊಂಡಿದ್ದು, ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ರವೇಶ ಪತ್ರದೊಂದಿಗೆ ಪರೀಕ್ಷೆಗೆ ಹಾಜರಾಗಬೇಕು.

ವಿವರಕ್ಕೆ : ಕೊಂಡಜ್ಜಿ (9008815296), ಕೆರೆಬಿಳಚಿ (9036866642), ದಾವಣಗೆರೆ (9916828601), ಹೊನ್ನಾಳಿ (9164855466), ಜಗಳೂರು (9964596266).

## ಮಾಚಿದೇವ ಸಂಘದ ವಿದ್ಯಾರ್ಥಿ ನಿಲಯಕ್ಕೆ ಹಣ ಬಿಡುಗಡೆಗೆ ಮನವಿ



ದಾವಣಗೆರೆ, ಮೇ 13- ಜಿಲ್ಲಾ ಮಡಿವಾಳ ಮಾಚಿದೇವ ಸಂಘದ ವತಿಯಿಂದ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಬೆಂಗಳೂರಿನ ಶಾಸಕರ ಭವನದಲ್ಲಿ ನಿನ್ನೆ ಭೇಟಿಯಾಗಿ, ಅಪೂರ್ಣಗೊಂಡಿರುವ ಮಾಚಿದೇವ ಸಂಘದ ವಿದ್ಯಾರ್ಥಿ ನಿಲಯದ ಕಾಮಗಾರಿಯನ್ನು ಪೂರ್ಣಗೊಳಿಸಲು 70 ಲಕ್ಷ ರೂ. ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಓಂಕಾರಪ್ಪ, ಉಪಾಧ್ಯಕ್ಷ ಪಿ. ಮಂಜುನಾಥ್, ಸಹಕಾರ್ಯದರ್ಶಿ ಆರ್.ಎನ್. ಧನಂಜಯ, ಖಜಾಂಚಿ ಸುರೇಶ್ ಕೋಗುಂಡೆ, ನಿರ್ದೇಶಕರಾದ ಸಿ. ಗುಡ್ಡಪ್ಪ, ಹೆಚ್. ದುಗ್ಗಪ್ಪ. ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸಂಭ್ರಮ

ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜ್ ವತಿಯಿಂದ ಇಂದು ಬೆಳಿಗ್ಗೆ 10 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಲುಂಬಿನಿ ಸಂಭ್ರಮ ಕಾರ್ಯಕ್ರಮ ನಡೆಯಲಿದೆ. ಸಾನ್ನಿಧ್ಯವನ್ನು ಶ್ರೀ ಬಸವ ಪ್ರಭು ಸ್ವಾಮೀಜಿ ವಹಿಸಲಿದ್ದು, ಜಿ.ಎಂ. ಸಿದ್ದೇಶ್ವರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಎಸ್.ಎ.ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು ಎಂದು ಸಂಸ್ಥೆಯ ಅಧ್ಯಕ್ಷ ಜಿ.ವೀರಭದ್ರಪ್ಪ ತಿಳಿಸಿದ್ದಾರೆ.

ಕೆ.ಜಿ.ಯಲ್ಲಪ್ಪ, ರುದ್ರಮುನಿ, ಹೆಚ್.ಕೆ.ಬಸವರಾಜ್, ಜಯಮ್ಮ ಗೋಪಿನಾಯ್ಕ್, ಅಶೋಕ್ ರಾಯಭಾಗಿ, ಶ್ರೀಮತಿ ಕೌಸರ್ ರೇಷ್ಮ, ಡಾ|| ಷಣ್ಮುಖಪ್ಪ ಅವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಮಹಾಂತೇಶ್ ಬೀಳಗಿ, ವಿಶ್ವನಾಥ್ ಮುದಜ್ಜಿ, ಡಾ|| ಸುಬ್ಬರಾವ್, ಶ್ರೀಮತಿ ತ್ರಿವೇಣಿ ಅವರುಗಳನ್ನು ಸನ್ಮಾನಿಸಲಾಗುತ್ತದೆ.

## ನಗರದಲ್ಲಿ ಇಂದು ಜಿಲ್ಲಾ ಬಿಜೆಪಿ ಪ್ರಕೋಷ್ಠಗಳ ಸಮಾವೇಶ

ದಾವಣಗೆರೆ ಜಿಲ್ಲೆಯ ಬಿಜೆಪಿ ಪ್ರಕೋಷ್ಠಗಳ ಸಮಾವೇಶವು ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ ವಹಿಸುವರು. ಕಾರ್ಯಕ್ರಮದ ಉದ್ಘಾಟನೆಯನ್ನು ಇಂಧನ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್ ನೆರವೇರಿಸಲಿದ್ದಾರೆ.

ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಜಿ.ಎಂ. ಸಿದ್ದೇಶ್ವರ, ಎಸ್.ಎ. ರವೀಂದ್ರನಾಥ್, ಎಂ.ಪಿ.ರೇಣುಕಾಚಾರ್ಯ, ಮಾಡಾಳು ವಿರುಪಾಕ್ಷಪ್ಪ, ಎಸ್. ವಿ. ರಾಮಚಂದ್ರಪ್ಪ, ಪ್ರೊ. ಲಿಂಗಣ್ಣ, ಡಾ.ಶಿವಯೋಗಿ ಸ್ವಾಮಿ, ಕೆ.ಎಂ ಸುರೇಶ್, ಶ್ರೀಮತಿ ಜಯಮ್ಮ ಗೋಪಿನಾಯ್ಕ, ಜೇಷ್ಠ ಪಡಿವಾಳ್, ಬಿ.ಎಸ್ ಜಗದೀಶ್, ಶಾಂತ್‌ರಾಜ್ ಪಾಟೀಲ್, ನಾಗರಾಜ್ ಸೊಕ್ಕೆ ಮತ್ತು ಇತರರು ಭಾಗವಹಿಸುವರು ಎಂದು ಜಿಲ್ಲಾ ಬಿಜೆಪಿ ವಕ್ತಾರ ಡಿ.ಎಸ್. ಶಿವಶಂಕರ್ ತಿಳಿಸಿದ್ದಾರೆ.

## ಶಿರಮನಳ್ಳಿಯಲ್ಲಿ ಬಸವ ಜಯಂತಿ



ದಾವಣಗೆರೆ, ಮೇ 13 ಸಮೀಪದ ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು. ಬಸವೇಶ್ವರರ ಭಾವಚಿತ್ರವನ್ನು ಮತ್ತು ಅವರ ಅನುಭವ ಮಂಟಪದ ಶಿವಶರಣರ ವೇಷಧಾರಿಗಳ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ, ಕಲಾ ಮೇಳಗಳೊಂದಿಗೆ ನಡೆಸಲಾಯಿತು.

ಶಾಸಕ ಎಸ್.ಎ. ರವೀಂದ್ರನಾಥ್ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ವಿನುತಾ ಸುರೇಶ್ ಬಾಬು, ಹಿರಿಯರಾದ ಪಾಟೀಲ ಅಜ್ಜಪ್ಪ, ಮುಖಂಡರುಗಳಾದ ವೀರೇಂದ್ರ ಪಾಟೀಲ್, ಎನ್. ನಾಗರಾಜಪ್ಪ, ಎ.ಬಿ. ಕರಿಬಸಪ್ಪ, ಎ.ಎಚ್. ಚನ್ನಬಸಪ್ಪ, ಆರ್. ದಿನೇಶ್, ಎ. ವಸಂತಕುಮಾರ್, ಉಮೇಶ್ ಜೆ. ವಕೀಲರು, ರವಿಕುಮಾರ್, ಗೌಡ್ರ ಚನ್ನಬಸಪ್ಪ, ಕೆ.ಎಸ್. ರೇವಣಸಿದ್ದಪ್ಪ, ಬೆಳವನೂರು ಮಂಜುನಾಥ್, ಶಿವಕುಮಾರಸ್ವಾಮಿ, ಹೇಮಂತ್ ರಾಜ್, ಎಎಪಿ ಚನ್ನಬಸಪ್ಪ, ಗೌಡ್ರ ಹರೀಶ್, ಪ್ರವೀಣ್, ಆಕಾಶ್, ಆರ್.ಜೆ.ಪ್ರದೀಪ್, ಎನ್.ಎಂ. ಬಸವರಾಜ್, ಬಳ್ಳಾರಿ ಲೋಕೇಶ್ ಇತರರು ಭಾಗವಹಿಸಿದ್ದರು.

## ನಗರದಲ್ಲಿ ಅವಾರ್ಡ್ ಕಾರ್ಯಕ್ರಮ

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ತುಮಕೂರು ವಲಯದಿಂದ ಇಂದು ಬೆಳಿಗ್ಗೆ 11 ಗಂಟೆಗೆ ಎಸ್‌ಎಸ್ ಬಡಾವಣೆಯ ಬಾಪೂಜಿ ಆಡಿಟೋರಿಯಂನಲ್ಲಿ ವಾರ್ಷಿಕ ಅವಾರ್ಡ್ ಕಾರ್ಯಕ್ರಮ ನಡೆಯಲಿದೆ. ಎಸ್. ಸಂತೋಷ್ ಮೆನನ್, ಡಾ. ಎಸ್.ಎಸ್. ಬಕ್ಕೇಶ್, ವಿನಯ್ ಮೃತ್ಯುಂಜಯ, ಎ.ಎಸ್. ವೀರಣ್ಣ, ಮಂಜುನಾಥ್ ರಾಜು, ಅರವಿಂದ್ ಗೌಡ ಅವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸುವರು. ಮೋಹನ್ ರಾವ್ ಅಧ್ಯಕ್ಷತೆ ವಹಿಸುವರು. ತುಮಕೂರು ವಲಯದ ಕೆ. ಶಶಿಧರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

## ಕೊಪ್ಪ : ಇಂದು ದೇವಸ್ಥಾನ ಉದ್ಘಾಟನೆ

ಮಲೇಬೆನ್ನೂರು ಸಮೀಪದ ಕೊಪ್ಪ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಆಂಜನೇಯ ಸ್ವಾಮಿ, ಶ್ರೀ ಭೈರಸಿದ್ದೇಶ್ವರ, ಶ್ರೀ ಬಸವೇಶ್ವರ, ಶ್ರೀ ಈಶ್ವರ ಸ್ವಾಮಿ, ಶ್ರೀ ದೊಡ್ಡ ಕೆಂಚಮ್ಮ, ಶ್ರೀ ಚೌಡೇಶ್ವರಿ, ಶ್ರೀ ಗಲ್ಲೆ ದುರುಗಮ್ಮ ದೇವಿ ದೇವಸ್ಥಾನ ಉದ್ಘಾಟನೆ ಹಾಗೂ ಮೂರ್ತಿಗಳ ಪ್ರತಿಷ್ಠಾಪನೆ ಇಂದು ಬೆಳಿಗ್ಗೆ 7 ರಿಂದ 10 ಗಂಟೆಯವರೆಗೆ ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಶ್ರೀ ಚನ್ನಮಲ್ಲಿಕಾರ್ಜುನ ಶ್ರೀಗಳವರ ನೇತೃತ್ವದಲ್ಲಿ ಜರುಗಲಿದೆ.

11 ಕ್ಕೆ ಧರ್ಮಸಭೆ ಸಾನ್ನಿಧ್ಯ : ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಸ್ವಾಮಿ, ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಶ್ರೀ ಬಸವ ಯಾದವಾನಂದ ಸ್ವಾಮೀಜಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ, ಶ್ರೀ ಸದ್ಗುರು ಮುರುಳೀಧರ ಸ್ವಾಮೀಜಿ, ರಾಜಯೋಗಿನಿ ಬಿ.ಕೆ.ಮಂಜುಳಾಜಿ. ಮುಖ್ಯ ಅತಿಥಿಗಳು : ಜಿ.ಎಂ.ಸಿದ್ದೇಶ್ವರ, ಎಸ್.ರಾಮಪ್ಪ, ಹೆಚ್.ಎಸ್. ಶಿವಶಂಕರ್, ಬಿ.ಪಿ.ಹರೀಶ್, ಜಿ.ದ್ಯಾಮಣ್ಣ, ಬಿ.ಚಿದಾನಂದಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ, ಪಿ.ಎಸ್.ಹನುಮಂತಪ್ಪ ಮತ್ತಿತರರು.

## ಗುರು ರೇಣುಕರ ಯುಗಮಾನೋತ್ಸವ

ದಾವಣಗೆರೆ, ಮೇ 13- ವಿಶ್ವ ವೀರಶೈವ ಲಿಂಗಾಯತ ಏಕೀಕರಣ ಪರಿಷತ್, ವಿಶ್ವ ಕಲ್ಯಾಣ ಪರಿಸರ ಗ್ರಾಹಕ, ಸಾಂಸ್ಕೃತಿಕ ದಾವಣಗೆರೆ ವತಿಯಿಂದ ನಾಡಿದ್ದು ದಿನಾಂಕ 15ರ ಭಾನುವಾರ ಬೆಳಿಗ್ಗೆ 10.30ಕ್ಕೆ ನಗರದ ರೋಟರಿ ಬಾಲಭವನದಲ್ಲಿ ಶ್ರೀ ಗುರು ರೇಣುಕರ ಯುಗಮಾನೋತ್ಸವ, ಬಸವ ಜಯಂತಿ ಸೇರಿದಂತೆ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪರಿಷತ್ ಅಧ್ಯಕ್ಷ ರೇವಣ್ಣ ಬಳ್ಳಾರಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಚನ್ನಗಿರಿ ಕೇದಾರ ಹಿರೇಮಠದ ಕೇದಾರಲಿಂಗ ಶಿವಾಚಾರ್ಯ ಶ್ರೀಗಳು, ಕವಲೆತ್ತು ವಿರಕ್ತಮಠದ ಶರಣೆ ಮುಕ್ತಾಯಕ್ಕ ಸಮಾರಂಭದ ಸಾನ್ನಿಧ್ಯ ವಹಿಸುವರು. ಎನ್.ಜೆ. ಶಿವಕುಮಾರ್, ಎಸ್.ಎಸ್. ವಿನಯ್ ಕುಮಾರ್, ಇಂದೂಧರ್ ನಿಶಾನಿ ಮಠ, ಹೆಚ್.ವಿ. ಪ್ರಭುಲಿಂಗಪ್ಪ, ಟಿ. ಆರ್. ಪಂಕಜಾ ಹಾಗು ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ನೀರಿನ ಟ್ಯಾಂಕ್‌ಗೆ ಬಾಗಿದ ಮರ : ಅಪಾಯದ ಆತಂಕ




ದಾವಣಗೆರೆ, ಮೇ 13- ಬಹಳ ಹಳೆಯ ನೀರಿನ ಟ್ಯಾಂಕ್‌ಗೆ ಬೃಹತ್ ಮರವೊಂದು ವಾಲಿಕೊಂಡು ಬೀಳುವ ಹಂತ ತಲುಪಿದ್ದು, ಅಪಾಯಕ್ಕೆ ಕಾದು ಕುಳಿತಿರುವಂತಿದೆ ಎಂಬ ಆತಂಕ ಸಮೀಪದಲ್ಲಿ ಮನೆಯಿರುವ ವಾಸಿಗಳು, ನೀರು ಹೊತ್ತೊಯುವ ನಾಗರಿಕರಲ್ಲಿ ಮನೆ ಮಾಡಿದೆ.

ನಗರದ 8ನೇ ವಾರ್ಡ್‌ನ ಕುಂಬಾರ ಪೇಟೆಯಲ್ಲಿ ಸಾರ್ವಜನಿಕ ನೀರಿನ ಟ್ಯಾಂಕ್ ಅನ್ನು ಕಳೆದ ಸುಮಾರು 20 ವರ್ಷಗಳ ಹಿಂದೆ ಕಟ್ಟೆ ಕಟ್ಟಿ ಟ್ಯಾಂಕ್ ನಿರ್ಮಿಸಲಾಗಿದ್ದು, ಹಳೆಯದಾಗಿದ್ದರಿಂದ ಈಗ ಮೊದಲೇ ಭದ್ರವಾಗಿ ನಿಲ್ಲಲು ಸಾಧ್ಯವಿಲ್ಲದಂತಾಗಿದ್ದು, ಈ ನಡುವೆಯೇ ಬೃಹತ್ ಮರವೊಂದು ಟ್ಯಾಂಕ್‌ಗೆ ಬಾಗಿ ನಿಂತಿದೆ. ಇದರಿಂದ ಟ್ಯಾಂಕ್ ಮೇಲಿನ ಮುಚ್ಚಳವು ಬೀಳುವ ಹಂತ ತಲುಪಿದೆಯಲ್ಲದೇ, ಮರದ ಭಾರವೂ ಬೀಳುತ್ತಿರುವುದರಿಂದ ಟ್ಯಾಂಕ್ ಸಹ ನೆಲಕ್ಕುರುಳುವ ಸಂಭವ ಹೆಚ್ಚಾಗಿದೆ ಎಂಬ ಆತಂಕ ಸ್ಥಳೀಯರಲ್ಲಿ ಕಾಡುತ್ತಿದೆ.

ಇಂತಹ ಅಪಾಯದ ಸಂದರ್ಭದಿಂದ ನೀರು ಹೊತ್ತೊಯ್ಯುವಾಗ, ಚಿಕ್ಕ ಮಕ್ಕಳು ಓಡಾಡುವಾಗ ಅನಾಹುತ ಸಂಭವಿಸುವ ಮತ್ತು ಸಮೀಪದಲ್ಲಿನ ಮನೆಗಳಿಗೆ ಹಾನಿ ಸಾಧ್ಯತೆ ಹೆಚ್ಚಿದೆ. ನೀರಿನ ಟ್ಯಾಂಕ್ ಇರುವುದರಿಂದ ಯಾವುದೇ ತೊಂದರೆ ಎದುರಾಗಿಲ್ಲ. ಆದರೆ ಮರವು ಬಾಗಿರುವುದರಿಂದ ಟ್ಯಾಂಕ್ ಬೀಳುವ ಸಾಧ್ಯತೆ ಇದ್ದು, ಅನಾಹುತಕ್ಕಿಂತ ಮುನ್ನವೇ ಸಂಬಂಧಪಟ್ಟವರು ಈ ಬಗ್ಗೆ ಕಾಳಜಿ ವಹಿಸಿ, ಮುಂಜಾಗ್ರತಾ ದೃಷ್ಟಿಯಿಂದ ಪರಿಹಾರ ಹುಡುಕುವಂತೆಯೂ ಸಹೃದಯಿ ನಾಗರಿಕರು ಮನವಿ ಮಾಡಿದ್ದಾರೆ.


ಓಂ ಶ್ರೀ ಸಾಯಿ ವೈಷ್ಣವಿದೇವಿ ಜ್ಯೋತಿಷ್ಯಾಲಯ



ಪಂಡಿತ್ ವಿಶ್ವನಾಥ್ ಗುರೂಜಿ
ಕೊಳ್ಳೇಗಾಲದ ನಂ.1 ಜ್ಯೋತಿಷ್ಯರು.
ಮೊ: 91087 03626
ಕುಟುಂಬ ಸಮಸ್ಯೆ, ಸಂತಾನ, ಪ್ರೇಮ ವಿಚಾರ, ದಾಂಪತ್ಯದಲ್ಲಿ ತೊಂದರೆ, ಸಾಲದ ಬಾಧೆ, ಜಾಗದ ವಿಚಾರ, ಆರೋಗ್ಯ, ಬಿಸಿನೆಸ್, ಮನಃಶಾಂತಿ, ಶತ್ರುಕಾಟ, ಮಾಟ ಮಂತ್ರ, ಯಾವುದೇ ರೀತಿಯ ಗುಪ್ತ ಸಮಸ್ಯೆಗಳಿದ್ದರೂ ವೈಷ್ಣವಿ ದೇವಿ ಬಲಿಷ್ಠ ಪೂಜೆಯಿಂದ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ 100% ಗ್ಯಾರಂಟಿ. ಇಂದೇ ಭೇಟಿ ಕೊಡಿ.
ವಿಳಾಸ: ಶಾಮನೂರು ರಸ್ತೆ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ದಾವಣಗೆರೆ.



Wanted
1. FITTERS AND HELPERS Male
2. SALES EXECUTIVE
SCHAMEG MODULAR INDUSTRIES
Behind Hotel Sai International, P. B. Road, Davangere.
M : 94486 58233

# ಜಗಳೂರು: ಹತ್ತಿ ಬೆಳೆಯುವತ್ತ ರೈತರ ಚಿತ್ತ

ಬಿ.ಪಿ. ಸುಭಾನ್





ಜಗಳೂರು, ಮೇ 13 - ಬರಪೀಡಿತ ತಾಲ್ಲೂಕು ಎಂದು ಹೆಸರು ಪಡೆದ ಜಗಳೂರು ತಾಲ್ಲೂಕಿನಲ್ಲಿ ಪ್ರಸಕ್ತ ವರ್ಷ ಸಮೃದ್ಧವಾದ ಮುಂಗಾರು ಪೂರ್ವ ಮಳೆಯಾಗಿದ್ದು, ರೈತರ ಮುಖದಲ್ಲಿ ಮಂದಹಾಸ ಮೂಡಿದೆ.

ಕಳೆದ ವರ್ಷ ಅತಿ ಹೆಚ್ಚು ಈರುಳ್ಳಿ ಬೆಳೆದು ಬೆಲೆ ಸಿಗದೇ ಸಂಕಷ್ಟ ಅನುಭವಿಸಿದ ತಾಲ್ಲೂಕಿನ ರೈತರು, ಈ ವರ್ಷ 'ಹತ್ತಿ ಬೆಳೆಯತ್ತ ಚಿತ್ತ' ಹರಿಸಿದ್ದಾರೆ.

ಮುಂಗಾರಿನಲ್ಲಿ ಹೆಚ್ಚು ಮಳೆಯಾಗಿರುವುದು ಒಂದು ಕಾರಣವಾದರೆ, ಕಳೆದ ವರ್ಷ ಹತ್ತಿಗೆ ಹೆಚ್ಚು ಅಂದರೆ ಕ್ವಿಂಟಾಲ್‌ಗೆ ರೂ. 17 ಸಾವಿರ ಮಾರಾಟವಾಗಿದ್ದು ಮತ್ತೊಂದು ಕಾರಣವಾಗಿದೆ.

**3200 ಹೆಕ್ಟೇರ್ ಹತ್ತಿ ಬಿತ್ತನೆ :** ತಾಲ್ಲೂಕಿನಲ್ಲಿ ಈ ವರ್ಷ ಅತಿ ಹೆಚ್ಚು ಅಂದರೆ 3200 ಹೆಕ್ಟೇರ್ ಬಿತ್ತನೆಯಾಗಿದೆ. ಕಳೆದ ವರ್ಷ ಕೇವಲ 1250 ಹೆಕ್ಟೇರ್ ಬಿತ್ತನೆಯಾಗಿತ್ತು. ಪೂರ್ವ ಮುಂಗಾರು ಸಮಯದಲ್ಲಿ ತಾಲ್ಲೂಕಿನಲ್ಲಿ 3200 ಹೆಕ್ಟೇರ್ ಹತ್ತಿ ಬಿತ್ತನೆಯಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರದೇಶದಲ್ಲಿ ಹತ್ತಿ ಆಕ್ರಮಿಸಿಕೊಳ್ಳುವ ಸಂಭವವಿದೆ. ಕಳೆದ ವರ್ಷ ಹತ್ತಿಗೆ ಹೆಚ್ಚಿನ ಧಾರಣೆ ಸಿಕ್ಕಿದ್ದು, ರೈತರಿಗೆ ನೆರವಾಗಿತ್ತು. ಆದ್ದರಿಂದ ಈ ವರ್ಷ ಬಹುತೇಕ ರೈತರು ಹತ್ತಿ ಬೆಳೆಯತ್ತ ಗಮನ ಹರಿಸಿದ್ದಾರೆ.

ತಾಲ್ಲೂಕಿನಲ್ಲಿ ಹತ್ತಿ ಬಿತ್ತನೆ ಬೀಜಕ್ಕೆ ಹೆಚ್ಚಿನ ಬೇಡಿಕೆ ಉಂಟಾಗಿದ್ದು, ಕೃಷಿ ಇಲಾಖೆ ಅಧಿಕಾರಿಗಳು ಗುಣಮಟ್ಟದ ಬಿತ್ತನೆ ಬೀಜದ ಬಿತ್ತನೆಗೆ ಸಲಹೆ ನೀಡಿದ್ದಾರೆ. ತಾಲ್ಲೂಕಿನ ಕಸಬಾ ಹೋಬಳಿ ಮತ್ತು ಸೊಕ್ಕೆ ಹೋಬಳಿಯಲ್ಲಿ ಹೆಚ್ಚಿನ ಬಿತ್ತನೆಯಾಗಿದೆ. ಈಗಾಗಲೇ 14 ರಿಂದ 15 ಸಾವಿರ ಪಾಕೆಟ್ ವಿವಿಧ ಬಗೆಯ ಹತ್ತಿ ಬಿತ್ತನೆ ಬೀಜಗಳು ಮಾರಾಟವಾಗಿವೆ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

ಕಳೆದ ವರ್ಷ ಈರುಳ್ಳಿ ಅತಿ ಹೆಚ್ಚು ವಿಸ್ತೀರ್ಣ ಬಿತ್ತನೆಯಾಗಿತ್ತು. ಉತ್ತಮ ಬೆಲೆ ಸಿಗದೆ, ರೈತರು ತೊಂದರೆ ಅನುಭವಿಸಿದ್ದರು. ಪ್ರಸಕ್ತ ಸಾಲಿನಲ್ಲಿ ಹತ್ತಿ ಬೆಳೆ ರೈತರ ಕೈ ಹಿಡಿಯುವುದೇ ಎಂಬುದನ್ನು ಕಾದು ನೋಡಬೇಕಿದೆ.

ತಾಲ್ಲೂಕಿನಲ್ಲಿ ಪೂರ್ವ ಮುಂಗಾರು ಉತ್ತಮ ಮಳೆಯಾಗಿರುವುದರಿಂದ ರೈತರು ಜಮೀನುಗಳಲ್ಲಿ ಬಿತ್ತನೆಗೆ ಸಿದ್ಧತೆ ಮಾಡುತ್ತಿದ್ದಾರೆ. ಈಗಾಗಲೇ ಹತ್ತಿ ಬೆಳೆ ಬಿತ್ತನೆ ಚುರುಕಾಗಿ ನಡೆಯುತ್ತಿದೆ.

ಮುಂಗಾರು ಹಂಗಾಮಿಗೆ ಸಂಬಂಧಪಟ್ಟಂತೆ ಬಿತ್ತನೆ ಬೀಜಗಳು ಮತ್ತು ರಸಗೊಬ್ಬರ ಮುಂಚಿತವಾಗಿ ಪರಿಕರ ಮಾರಾಟಗಾರರಲ್ಲಿ ದಾಸ್ತಾನೀಕರಿಸಲಾಗುತ್ತಿದೆ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪರಿಕರ ಮಾರಾಟಗಾರರ ಅಂಗಡಿಗಳಿಗೆ ಭೇಟಿ ನೀಡಿ, ದಾಸ್ತಾನೀಕರಿಸಲಾಗಿರುವ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ಮಾದರಿಯನ್ನು ಸಂಗ್ರಹಿಸಿ ಗುಣಮಟ್ಟವನ್ನು ಪರಿಶೀಲಿಸಲು ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿದೆ.

ಪರಿಕರ ಮಾರಾಟಗಾರರಿಗೆ ರಸಗೊಬ್ಬರ ಮಳಿಗೆಯಲ್ಲಿ ದರ ಪಟ್ಟಿಯನ್ನು ಪ್ರದರ್ಶಿಸಲು ರೈತರಿಗೆ ಬಿಲ್ಲು ನೀಡುವುದು ಮತ್ತು ಯಾವುದೇ ಕಾರಣಕ್ಕೂ ರಸಗೊಬ್ಬರವನ್ನು ತಾಲ್ಲೂಕಿನ ಹೊರಗಡೆ ನೀಡಿದ ರಸಗೊಬ್ಬರ ನಿಯಂತ್ರಣ ಅಧಿನಿಯಮ 1985ರ ಪ್ರಕಾರ ಕ್ರಮ ವಹಿಸಲಾಗುವುದು ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶ್ರೀನಿವಾಸಲು ತಿಳಿಸಿದ್ದಾರೆ.

# ದೇವರಬೆಳಕೆರೆ ಪಿಕಪ್‌ನಲ್ಲಿ ಸಸ್ಯ ರಾಶಿ : ಹಿನ್ನೀರಿನಿಂದ ರೈತರಿಗೆ ತೊಂದರೆ, ತಹಶೀಲ್ದಾರ್ ಭೇಟಿ



ಮಲೇಬೆನ್ನೂರು, ಮೇ 13- ದೇವರಬೆಳಕೆರೆ ಪಿಕಪ್ ಜಲಾಶಯದಿಂದ ಹೆಚ್ಚುವರಿ ನೀರು ಹೊರ ಹೋಗಲು ಜಲಸಸ್ಯ ರಾಶಿ ಅಡ್ಡಿಯಾಗಿದ್ದು, ಸ್ಥಳಕ್ಕೆ ಶುಕ್ರವಾರ ತಹಶೀಲ್ದಾರ್ ಡಾ. ಬಿ.ಎಂ.ಅಶ್ವತ್ಥ್ ಅವರು ಇಂದು ಭೇಟಿ ನೀಡಿ ಪರಿಶೀಲಿಸಿದರು.

ನೀರಿನಲ್ಲಿ ಹರಿದು ಬರುತ್ತಿರುವ ಸಸ್ಯರಾಶಿ ಜಲಾಶಯದ ಗೇಟ್ ಬಳಿ ಕಟ್ಟಿಕೊಂಡಿದ್ದು, ನೀರು ಸರಾಗವಾಗಿ ಹೊರ ಹೋಗದ ಕಾರಣ ಹಿನ್ನೀರಿನಲ್ಲಿ ಸಂಕ್ಲೀಪುರ, ಗುಳದಹಳ್ಳಿ ಸೇರಿದಂತೆ ಮತ್ತಿತರೆ ಗ್ರಾಮಗಳ ರೈತರ ಭತ್ತದ ಬೆಳೆ ಮುಳುಗುತ್ತಿದೆ ಎಂದು ಸಂಕ್ಲೀಪುರದ ರೈತ ನಾಗೇಂದ್ರಪ್ಪ ಅವರು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದರು.

ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಇಲ್ಲಿಗೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ರೈತರಿಗೆ ಆಗುತ್ತಿರುವ ತೊಂದರೆ ಬಗ್ಗೆಯೂ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುತ್ತೇನೆಂದು ಅಶ್ವತ್ಥ್ ಪತ್ರಕರ್ತರಿಗೆ ತಿಳಿಸಿದರು.

ಭದ್ರಾ ನಾಲಾ ನಂ-3 ಉಪ ವಿಭಾಗದ ಎಇಇ ಸಂತೋಷ್ ಮಾತನಾಡಿ, ಜಲಾಶಯದಲ್ಲಿ ಈಗಿರುವ ಸ್ವಯಂ ಚಾಲಿತ ಗೇಟ್‌ಗಳನ್ನು ತೆರವು ಮಾಡಿ, 8 ಮಾನವ ಚಾಲಿತ ಗೇಟ್‌ಗಳನ್ನು ಅಳವಡಿಸಲು 40 ಲಕ್ಷ ರೂ. ಅನುದಾನ ನೀಡುವಂತೆ ಕರ್ನಾಟಕ ನೀರಾವರಿ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಅನುಮತಿ ಸಿಕ್ಕ ತಕ್ಷಣ ಕಾಮಗಾರಿ ಪ್ರಾರಂಭಿಸುತ್ತೇವೆ. ಸದ್ಯ ರೈತರ ನೆರವಿನಿಂದ ನೀರಗಂಟಿಗಳು ಆಗಾಗ ಜಲ ಸಸ್ಯ ರಾಶಿಯನ್ನು ತೆಗೆದು ಹಾಕುತ್ತಿದ್ದಾರೆಂದು ಎಇಇ ಸಂತೋಷ್ ತಹಶೀಲ್ದಾರರಿಗೆ ಮಾಹಿತಿ ನೀಡಿದರು.

ರೈತ ಸಂಕ್ಲೀಪುರದ ನಾಗೇಂದ್ರಪ್ಪ ಮಾತನಾಡಿ, ಈ ಸಮಸ್ಯೆ ಬಗೆಹರಿಸಲು ಅಧಿಕಾರಿಗಳು ಆಸಕ್ತಿ ವಹಿಸದ ಕಾರಣ, ನೆನಗುದಿಗೆ ಬಿದ್ದಿದೆ ಎಂದು ಬೇಸರ ವ್ಯಕ್ತಪಡಿಸಿದರು.

# ಕುಟುಂಬಕ್ಕೊಂದೇ ಟಿಕೆಟ್ ಸೂತ್ರಕ್ಕೆ ಕಾಂಗ್ರೆಸ್ ಪರಿಶೀಲನೆ

ಉದಯಪುರ, ಮೇ 13 – ಕನಿಷ್ಠ ಐದು ವರ್ಷ ಪಕ್ಷದಲ್ಲಿ ಕೆಲಸ ಮಾಡುತ್ತಿರುವವರನ್ನು ಹೊರತು ಪಡಿಸಿ, ಉಳಿದ ಎಲ್ಲರಿಗೂ ಒಂದು ಕುಟುಂಬಕ್ಕೆ ಒಂದೇ ಟಿಕೆಟ್ ಎಂಬ ನಿಯಮ ಜಾರಿಗೆ ತರಲು ಕಾಂಗ್ರೆಸ್ ಪರಿಶೀಲಿಸುತ್ತಿದೆ.

ಐದು ವರ್ಷ ಯಾರಾದರೂ ಪಕ್ಷದಲ್ಲಿ ಅಧಿಕಾರ ಹೊಂದಿದ್ದರೆ, ಮೂರು ವರ್ಷಗಳ ಬಿಡುವಿನ ಅವಧಿ ನೀಡಲು ಹಾಗೂ ಪದಾಧಿಕಾರಿಗಳ ಸಾಮರ್ಥ್ಯ ಅಳೆಯಲು ವ್ಯವಸ್ಥೆ ರೂಪಿಸುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ.

ಕಾಂಗ್ರೆಸ್ ಪಕ್ಷದ ಚಿಂತನಾ ಶಿಬಿರಕ್ಕೆ ಮುಂಚೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಜಯ್ ಮಾಕೆನ್, ಸಂಘಟನೆಯಲ್ಲಿ ದೊಡ್ಡ ಬದಲಾವಣೆಗಳನ್ನು ತರಲಾಗುತ್ತಿದೆ. ಇದು ಕಾರ್ಯ ನಿರ್ವಹಣೆ ಸಂಪೂರ್ಣ ರೂಪಾಂತ ರಗೊಳಿಸಲಿದೆ ಎಂದಿದ್ದಾರೆ.

ಪಕ್ಷದ ಎಲ್ಲಾ ಹಂತಗಳಲ್ಲಿ ಶೇ.50ರಷ್ಟು ಹುದ್ದೆಗಳನ್ನು 50 ವರ್ಷದೊಳಗಿನವರಿಗೆ ಮೀಸಲಿಡುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ. ಪಕ್ಷದ ಸಂಘಟನೆಯಲ್ಲಿ ಬೂತ್ ಹಾಗೂ ಬ್ಲಾಕ್ ನಡುವೆ ಮಂಡಲ್ ಸಮಿತಿಗಳನ್ನು ರಚಿಸುವ ಬಗ್ಗೆ ಸರ್ವ ಸಮ್ಮತಿ ಇದೆ ಎಂದವರು ಹೇಳಿದ್ದಾರೆ.

# ಪುರಸಭೆ ಸದಸ್ಯರಿಂದ ದೂರು : ಮುಖ್ಯಾಧಿಕಾರಿ, ಇಂಜಿನಿಯರ್ ಎತ್ತಂಗಡಿ

ಮಲೇಬೆನ್ನೂರು

ಮಲೇಬೆನ್ನೂರು, ಮೇ 13- ಇಲ್ಲಿನ ಪುರಸಭೆಯ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ಅವರನ್ನು ಶುಕ್ರವಾರ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ವರ್ಗಾವಣೆ ಮಾಡಿ, ಪೌರಾಡಳಿತ ನಿರ್ದೇಶನಾಲಯದಲ್ಲಿ ವರದಿ ಮಾಡಿಕೊಳ್ಳುವಂತೆ ಆದೇಶಿಸಿದ್ದಾರೆ.

ಪುರಸಭೆ ಕಚೇರಿಯ ವ್ಯವಸ್ಥಾಪಕ ಗಣೇಶ್ ರಾವ್ ಅವರನ್ನು ಪ್ರಭಾರ ಮುಖ್ಯಾಧಿಕಾರಿಯನ್ನಾಗಿ ನೇಮಕ ಮಾಡಿದ್ದಾರೆ.

**ದೂರು :** ಮುಖ್ಯಾಧಿಕಾರಿಯಾಗಿದ್ದ ಶ್ರೀಮತಿ ರುಕ್ಮಿಣಿ ಅವರು ಪುರಸಭೆ ಸದಸ್ಯರು ಹಾಗೂ ಕಿರಿಯ ಅಧಿಕಾರಿಗಳ ಜೊತೆ ಆಡಳಿತಾತ್ಮಕವಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತಿಲ್ಲ. ಇದರಿಂದ ಪುರಸಭೆಯಲ್ಲಿ ಹೊಸ ಸಮಸ್ಯೆ ಉದ್ಭವವಾಗುತ್ತಿದ್ದು, ಸರ್ವಾಧಿಕಾರಿ ಆಡಳಿತ ನಡೆಸುತ್ತಿದ್ದಾರೆ. ಕೂಡಲೇ ವರ್ಗಾವಣೆ ಮಾಡುವಂತೆ ಶುಕ್ರವಾರ ಪುರಸಭೆ ಸದಸ್ಯರು ಪತ್ರ ಮೂಲಕ ಮನವಿ ಮಾಡಿದ ತಕ್ಷಣ ಜಿಲ್ಲಾಧಿಕಾರಿ ಅವರು ವರ್ಗಾವಣೆ ಮಾಡಿದ್ದಾರೆ.

ಜೊತೆಗೆ ಇಂಜಿನಿಯರ್ ಹಾಲೇಶಪ್ಪ ಅವರನ್ನು ಹರಿಹರ ನಗರಸಭೆಗೆ ನಿಯೋಜನೆ ಮಾಡಲಾಗಿದ್ದು, ಅಲ್ಲಿದ್ದ ಇಂಜಿನಿಯರ್ ರಂಗಸ್ವಾಮಿ ಅವರನ್ನು ಮಲೇಬೆನ್ನೂರು ಪುರಸಭೆಗೆ ವರ್ಗಾಯಿಸಲಾಗಿದೆ.

# ವಿದೇಶ ಪ್ರವಾಸ: 3 ತಿಂಗಳಿಗೆ ಮುನ್ನೆಚ್ಚರಿಕೆ ಡೋಸ್

ನವದೆಹಲಿ, ಮೇ 13 – ಉದ್ಯೋಗ, ಶಿಕ್ಷಣ ಹಾಗೂ ವಹಿವಾಟಿನ ಉದ್ದೇಶಕ್ಕಾಗಿ ವಿದೇಶ ಪ್ರಯಾಣ ಮಾಡುವವರು ಎರಡನೇ ಕೊರೊನಾ ಡೋಸ್ ಪಡೆದ ಮೂರು ತಿಂಗಳಲ್ಲೇ ಮುನ್ನೆಚ್ಚರಿಕಾ ಡೋಸ್ ಪಡೆಯಬಹುದು ಎಂದು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಇದುವರೆಗೂ ಮುನ್ನೆಚ್ಚರಿಕಾ ಡೋಸ್ ಪಡೆಯಲು ಒಂಭತ್ತು ತಿಂಗಳು ಕಾಯಬೇಕಿತ್ತು.

ರಾಜ್ಯಗಳಿಗೆ ಪತ್ರ ಬರೆದಿರುವ ಕೇಂದ್ರ ಸರ್ಕಾರ, ವಿದೇಶ ಪ್ರಯಾಣ ಮಾಡುವವರು ತ್ವರಿತವಾಗಿ ಮುನ್ನೆಚ್ಚರಿಕೆ ಡೋಸ್ ಪಡೆಯಲು ಕೊ-ವಿನ್ ವೆಬ್ ತಾಣದಲ್ಲಿ ಬದಲಾವಣೆ ತರಲಾಗಿದೆ.

ವೀಸಾ ರೀತಿಯ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಮುನ್ನೆಚ್ಚರಿಕೆ ಡೋಸ್ ಪಡೆಯಬಹುದು ಎಂದರು.

# ಸಮಾನತೆ ಸಮಾಜ ನಿರ್ಮಾಣದಲ್ಲಿ ವಚನಗಳು ಅತ್ಯಗತ್ಯ




## ತಾಲ್ಲೂಕು ಕಸಾಪದ ವಿಶ್ವ ತಾಯಂದಿರ ದಿನಾಚರಣೆಯಲ್ಲಿ ಎಸ್.ಎಂ. ಮಲ್ಲಮ್ಮ

ದಾವಣಗೆರೆ, ಮೇ 13- ಸಮಾನತೆ ಸಮಾಜ ನಿರ್ಮಾಣಕ್ಕೆ ಶರಣರ ವಚನಗಳು ಅಗತ್ಯ. ವಚನ ಚಳವಳಿ ನಡೆದು 900 ವರ್ಷಗಳು ಗತಿಸಿದರೂ, ವಚನ ಸಾಹಿತ್ಯ ಇಂದಿಗೂ ಪ್ರಸ್ತುತವಾಗಿದೆ ಎಂದು ವಿಶ್ರಾಂತ ಉಪನ್ಯಾಸಕರಾದ ಎಸ್.ಎಂ. ಮಲ್ಲಮ್ಮ ಹೇಳಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, 'ಆಶ್ರಯ' ಹಿರಿಯ ವನಿತೆಯರ ಆರೋಗ್ಯ ಧಾಮ, ವನಿತಾ ಸಮಾಜ ಹಾಗೂ 'ಪ್ರಜ್ಞಾ' ಆಲ್ ಇಂಡಿಯಾ ವುಮೆನ್ಸ್ ಕಾನ್ಫರೆನ್ಸ್ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಹಿರಿಯ ವನಿತೆಯರ ಆರೋಗ್ಯಧಾಮದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ, ವಿಶ್ವ ತಾಯಂದಿರ ದಿನಾಚರಣೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಇಂದಿನ ಸಮಾಜದಲ್ಲಿ ವಚನ ಸಾಹಿತ್ಯದ ಅಗತ್ಯತೆ' ಕುರಿತು ಮಾತನಾಡಿದರು.

ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ ಶರಣರು ಸಮಾಜಕ್ಕೆ ವಚನಗಳ ಮೂಲಕ ಅಪಾರ ಕೊಡುಗೆ ನೀಡಿದ್ದಾರೆ. ಹನ್ನೆರಡನೇ ಶತಮಾನದ ಶರಣರ ವಚನಗಳು ವಿಶ್ವ ಮಾನ್ಯತೆ ಪಡೆದಿವೆ ಎಂದರು.

ಸಮಾಜ ಜಾಗೃತಿಗೆ ಬಸವಾದಿ ಶರಣರ ತತ್ವಗಳನ್ನು ಅಧ್ಯಯನ ಮಾಡುವ ಮೂಲಕ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿರುವ ಮೂಢನಂಬಿಕೆ, ಕಂದಾಚಾರ, ಶೋಷಣೆಯ ವಿರುದ್ಧ ಹೋರಾಡಬೇಕಾಗಿದೆ ಎಂದು ಹೇಳಿದರು.

ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಶಾಖೆ ಅಧ್ಯಕ್ಷರಾದ ಶ್ರೀಮತಿ ವೀಣಾ ಕೃಷ್ಣಮೂರ್ತಿ ಮಾತನಾಡಿ, ತಾಯಿಗೆ ಅಗೌರವ ತೋರದೇ, ಅವಮಾನಗೊಳಿಸದೇ ಜೀವನ ಪರ್ಯಂತ ಚನ್ನಾಗಿ ಕಾಪಾಡಿಕೊಳ್ಳಬೇಕಾಗಿದೆ ಎಂದರು.

ತಾಯಿ ಮಕ್ಕಳಿಗೆ ಉತ್ತಮ ಸಂಸ್ಕಾರ, ಜೀವನ ಮೌಲ್ಯಗಳನ್ನು ಕಲಿಸಿ ಕೊಡುತ್ತಾಳೆ. ಅಂತಹ ತಾಯಿಗೆ ನಾವು ಋಣಿಯಾಗಿರಬೇಕಾಗುತ್ತದೆ ಎಂದು ಹೇಳಿದರು.

'ಪ್ರಜ್ಞಾ' ಆಲ್ ಇಂಡಿಯಾ ವುಮೆನ್ಸ್ ಕಾನ್ಫರೆನ್ಸ್ ದಾವಣಗೆರೆ ಅಧ್ಯಕ್ಷರಾದ ನೀಲಗುಂದ ಜಯಮ್ಮ ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ವನಿತೆಯರ ಆರೋಗ್ಯ ಧಾಮದ ಅಧ್ಯಕ್ಷೆ ಸುನೀತಾ ವೀರನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

ಶ್ರೀಮತಿ ಉಮಾದೇವಿ ಪ್ರಾರ್ಥಿಸಿದರು. ಹಿರಿಯ ವನಿತೆಯರು ವಚನಗೀತೆ ಹಾಡಿದರು. ಟಿ.ಎಸ್.ಶೈಲಜಾ ಸ್ವಾಗತಿಸಿದರು. ಆರ್. ಶಿವಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ನಾಗವೇಣಿ ನಿರೂಪಿಸಿದರು. ಸುಷ್ಮಾ ವೇಣುಗೋಪಾಲ್ ವಂದಿಸಿದರು.

# ಚನ್ನಯ್ಯ ಒಡೆಯರ್ ಪತ್ನಿ ಹಾಲಮ್ಮ ಅಂತ್ಯಕ್ರಿಯೆಯಲ್ಲಿ ಎಸ್ಸೆಸ್ಸೆಂ



ಜಗಳೂರು, ಮೇ 13 - ಲೋಕಸಭಾ ಮಾಜಿ ಸದಸ್ಯ ಚನ್ನಯ್ಯ ಒಡೆಯರ್ ಅವರ ಧರ್ಮಪತ್ನಿ ಶ್ರೀಮತಿ ಹಾಲಮ್ಮ ಒಡೆಯರ್ ಅವರ ಅಂತ್ಯಕ್ರಿಯೆಯು ಬಿಳಿಚೋಡು ಗ್ರಾಮದಲ್ಲಿ ಇಂದು ನಡೆಯಿತು. ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ, ಮೃತರ ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಕನಕ ಗುರು ಪೀಠದ ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮೀಜಿ, ಮಾಜಿ ಶಾಸಕ ಹೆಚ್.ಪಿ. ರಾಜೇಶ್, ಉಮಾಪತಿ, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್, ಬ್ಲಾಕ್ ಅಧ್ಯಕ್ಷ ಮಾಗಾನಹಳ್ಳಿ ಪರಶುರಾಮ್, ಕಂಬತ್ತಳ್ಳಿ ಮಂಜುನಾಥ್, ಮುಖಂಡರಾದ ಪಾಲಯ್ಯ, ಬಸಾಪುರದ ರವಿಚಂದ್ರ, ಭೈರೇಶ್, ಬಾಬು ಮುಂತಾದವರು ಭಾಗವಹಿಸಿದ್ದರು.

# ನಗರಕ್ಕೆ ಇಂದು ಸಚಿವ ಸುನಿಲ್ ಕುಮಾರ್

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ಸಚಿವ ವಿ. ಸುನೀಲ್ ಕುಮಾರ್ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 10.30 ಕ್ಕೆ ಹೋಟೆಲ್ ಪೂಜಾ ಇಂಟರ್ ನ್ಯಾಷನಲ್‌ನಲ್ಲಿ ನಡೆಯಲಿರುವ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವರು.

India's Largest Financial Education Company
WORK FROM HOME
Indian Money.Com is Hiring Relationship Manager
Permanent Work from Home.
with 15,000/- fixed Salary 30,000/- + Incentive
Qual : SSLC, PUC, Diploma Any Degree
For more Details Call
78923 89065



## ಹೊಟ್ಟೆಗಾಗಿ... ಗೇಣು ಬಟ್ಟೆಗಾಗಿ

ದಾವಣಗೆರೆ ನಗರದ ಎಂ.ಸಿ.ಸಿ 'ಬಿ' ಬ್ಲಾಕ್ ನಲ್ಲಿ ಹೊಟ್ಟೆಪಾಡಿಗಾಗಿ ಪುಟ್ಟ ಬಾಲಕಿ ಶ್ರೀ ಕೃಷ್ಣನ ವೇಷ ಧರಿಸಿ ಭಿಕ್ಷೆ ಬೇಡುತ್ತಿದ್ದ ದೃಶ್ಯ.

# ಎಲಿಸವ್ವ ಜಾನಪದ ತಂಡದಿಂದ ಕಾರ್ಮಿಕ ದಿನಾಚರಣೆ



ದಾವಣಗೆರೆ, ಮೇ 13 - ನಗರದ ಎಲಿಸವ್ವ ಜಾನಪದ ತಂಡ ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಮಿಕ ದಿನಾಚರಣೆಯನ್ನು ನಡೆಸಲಾಯಿತು.

ಮೀನಾಕ್ಷಿ ವೆಂಕಟೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಶೋಭ ಮಂಜುನಾಥ್ ಮುಖ್ಯ ಅತಿಥಿಯಾಗಿ ಆಗಮಿಸಿದರು. ಡೊಳ್ಳು ಕಲಾವಿದ ಬೆಳ್ಳೂಡಿ ರೇವಣಸಿದ್ದಪ್ಪ ಸಮಾರಂಭವನ್ನು ಉದ್ಘಾಟಿಸಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯ್ಯಪ್ಪ 'ಅಕ್ಕನ ವಚನಗಳಲ್ಲಿ ಮಹಿಳಾ ಅಸ್ಮಿತೆ' ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಮಹಿಳಾ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ತಂಡದ ಸದಸ್ಯರಾದ ಶ್ರೀಮತಿ ಮಂಗಳ ಮಲ್ಲಿಕಾರ್ಜುನ್, ಸುಧಾ, ಚಂದ್ರಿಕ, ಜ್ಯೋತಿ ದೀಪಕ್, ಉಷಾ, ಸುಮ, ಗೀತಾ, ಶೋಭ, ಸುಜಾತ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶ್ರೀ ಕನ್ನಿಕಾಪರಮೇಶ್ವರಿ ಕೊ-ಆಪ್. ಬ್ಯಾಂಕ್ ಲಿ.,
ಪ್ರಧಾನ ಕಛೇರಿ : #165/1-2, ಶ್ರೀ ವಾಸವಿ ರಸ್ತೆ, 3ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-02
ವಾಸವಿ ಜಯಂತಿ ಅಂಗವಾಗಿ ಆಚರಿಸುವ ಠೇವಣಿ ಮಾಸ ಯೋಜನೆಯಲ್ಲಿ
ನೂತನ ವಾಸವಿ-450' ರ ಠೇವಣಿಗೆ
ಶೇ.7.50
ಆಕರ್ಷಕ ಬಡ್ಡಿಯನ್ನು ನೀಡಲಾಗುತ್ತದೆ.
ಶಾಖೆಗಳು
ಪಿ.ಜೆ. ಬಡಾವಣೆ ಶಾಖೆ ವಾಸವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ. ಮೊ : 95135 63421
ಎಂ.ಜಿ. ರೋಡ್ ಶಾಖೆ ಎಂ.ಜಿ. ರಸ್ತೆ, ದಾವಣಗೆರೆ ಮೊ : 95135 63425
ಚನ್ನಗಿರಿ ಶಾಖೆ ಹೊಳೆಹೊನ್ನೂರು-ಶಿವಮೊಗ್ಗ ರಸ್ತೆ, ಚನ್ನಗಿರಿ. ಮೊ : 95135 63433
ಹರಪನಹಳ್ಳಿ ಶಾಖೆ ಗೌಳಿ ರಸ್ತೆ, ಹರಪನಹಳ್ಳಿ ಮೊ : 95135 63424

ಪುಣ್ಯಸ್ಮರಣೆ




ನಿಮ್ಮಗಳ ಆಶೀರ್ವಾದದ ಬೆಳಕಿನ ದಾರಿಯಲ್ಲಿ ಸದಾ ನಿಮ್ಮ ಚಿರ ನೆನಪಿನಲ್ಲಿರುವ

★ ಶ್ರೀಮತಿ ರಹಮತ್ ಬಿ. ಜನಾಬ್ ಟಿ. ಇಮಾಂ ಹುಸೇನ್, ಜಗಳೂರು.
★ ಶ್ರೀಮತಿ ಹುಸೇನ್ ಬಿ. ಜನಾಬ್ ಟಿ. ಶಫೀವುಲ್ಲ, ದಾವಣಗೆರೆ.
★ ಶ್ರೀಮತಿ ರೇಷ್ಮ ಬಾನು ಜನಾಬ್ ಟಿ. ದಾದಾಪೀರ್, ಜಗಳೂರು .
★ ಶ್ರೀಮತಿ ಸಿರಾಜುನ್ನೀಸಾ ಜನಾಬ್ ಟಿ. ಸುಭಾನ್, ಶುಭ ಎಲೆಕ್ಟ್ರಿಕಲ್ ವರ್ಕ್ಸ್, ಜಗಳೂರು.
★ ಶ್ರೀಮತಿ ನೂರ್ಜಾನ್ ಜನಾಬ್ ಎಲ್.ಸಿ. ಹುಸೇನ್ ಸಾಬ್, ದಾವಣಗೆರೆ

ಹಾಗೂ ಮೊಮ್ಮಕ್ಕಳು ಮತ್ತು ರಾಯಣ್ಣನಹಳ್ಳಿ ವಂಶಸ್ಥರು.

ಪುಣ್ಯಸ್ಮರಣೆ



ಜನನ: 07-01-1951
ಲಿಂಗೈಕ್ಯ : 14-05-2020

ದಿ. ಶ್ರೀಮತಿ ಎ.ಸಿ.ಶ್ಯಾಮಲ

ಅಮ್ಮ ನೀವಿಲ್ಲದೆ ಇಂದಿಗೆ ಎರಡು ವರ್ಷ.
ಸದಾ ಸ್ಮರಣೆಯಲ್ಲಿರುವ......
ನಿಮ್ಮ ಕುಟುಂಬ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte